ಜನಮನದ ದನಿ

# ಪ್ರಜೋದಯ

ಸಂಪಾದಕ : ಜಿ.ಆರ್. ಕೆಂಚೇಗೌಡ



ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ರಾಷ್ಟ್ರೀಯ ಆಯ್ಕೆ ಸಮಿತಿ ಸಭೆಯು ಇಂದು ನಡೆಯಲಿದೆ. ಈ ಸಂದರ್ಭದಲ್ಲಿ ವೆಸ್ಟ್ ಇಂಡೀಸ್ ಎದುರಿನ ಸರಣಿಗೆ ರಿಷಭ್ ಪಂತ್ ಮತ್ತು ಹಾರ್ದಿಕ್ ಪಾಂಡ್ಯ ತಂಡಕ್ಕೆ ಮರಳುವರೇ ಎಂಬ ಕುತೂಹಲ ಗರಿಗೆದರಿದೆ.

16 ಸೆಪ್ಟೆಂಬರ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -185 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಕುರುಚಲು ಕಾಡಿನ ಮಡಿಲಲ್ಲಿ ಕಿತ್ತಳೆ ತುದಿ ಚಿಟ್ಟೆಗಳ ಪ್ರಣಯ » 2


ಸಮಾಜದಲ್ಲಿ ನೆಮ್ಮದಿ ಜೀವನಕ್ಕೆ ಪ್ರಜಾಪ್ರಭುತ್ವದ ಪಾತ್ರ ಮುಖ್ಯ 3


ರಾಷ್ಟ್ರೀಯ ಏಕತೆ-ಸಮಗ್ರತೆಯನ್ನು ಗೌರವಿಸಲು ಸಲಹೆ » 4


# ನನ್ನನ್ನು ಹೆದರಿಸಲು ಬರಬೇಡಿ: ಹೆಚ್.ಡಿ.ಕೆ.

## ದೇವೇಗೌಡರ ಕುಟುಂಬದ ಧ್ವನಿ ಮುಚ್ಚಿಸಲು ಸಾಧ್ಯವಿಲ್ಲ: ಮುಖ್ಯಮಂತ್ರಿ ವಿರುದ್ಧ ವಾಗ್ದಾಳಿ

• ಪ್ರಜೋದಯ ವರದಿ

**ಹೊಳೆನರಸೀಪುರ :** ದೇವೇಗೌಡರ ಕುಟುಂಬದ ಧ್ವನಿಯನ್ನು ಯಾವುದೇ ರೀತಿಯ ಪ್ರಕರಣ, ಆರೋಪಗಳು ಅಥವಾ ರಾಜಕೀಯ ಒತ್ತಡಗಳ ಮೂಲಕ ಮುಚ್ಚಿಸಲು ಸಾಧ್ಯವಿಲ್ಲ. ತಪ್ಪು ಮಾಡಿದ್ದರೆ ಶಿಕ್ಷೆ ಅನುಭವಿಸಲು ಕೂಡ ಸಿದ್ಧನಿದ್ದೇನೆ. ಆದರೆ, ಧ್ವನಿ ಅಡಗಿಸುವ ಪ್ರಯತ್ನಗಳಿಗೆ ಹೆದರಿ ಹಿಂದೆ ಸರಿಯುವುದಿಲ್ಲವೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

ಮಂಗಳವಾರ ತಾಲ್ಲೂಕಿನ ಮಾವಿನಕೆರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಮನೆ ಅಲುಗಾಡಿಸಿರುವುದು ಯಾರೆಂಬುದು ನಿಮಗೆ ಗೊತ್ತಿದೆ. ಒಂದು ಸಾಕ್ಷಿ ಸಿದ್ಧಪಡಿಸಲು ಸಾಕಾಗಿದೆ ಎಂದು ಯಾರು ಹೇಳಿದ್ದರು, ದೇವೇಗೌಡರ ಕುಟುಂಬವನ್ನು ಮುಗಿಸುತ್ತೇವೆಂದು ಯಾರು ಹೇಳಿದ್ದರು, ಈ ಮಾತುಗಳನ್ನು ಹೇಳಿದ್ದು ಇದೇ ಮುಖ್ಯಮಂತ್ರಿ ಅಲ್ಲವೇ ಎಂದು ಪ್ರಶ್ನಿಸಿದರು.

ಒಬ್ಬ ವ್ಯಕ್ತಿಯನ್ನು ಬಂಧಿಸಿ ನಾಲ್ಕು ದಿನ ಜೈಲಿನಲ್ಲಿ ಇರಿಸಿದ್ದೇಕೆ. ಬಿಡದಿ, ನೈಸ್, ಕೆಪಿಎಸ್‌ಸಿ ವಿಚಾರಗಳು ಮುನ್ನೆಲೆಗೆ ಬಂದಾಗಲೇ ಪೆನ್‌ಡ್ರೈವ್ ಇದೆ, ಅದರಲ್ಲಿ ಅಶ್ಲೀಲ ಚಿತ್ರಗಳಿವೆ ಎಂದು ಹೇಳಲಾಗುತ್ತದೆ. ಎರಡು ವರ್ಷಗಳಿಂದ ಆ ಹುಡುಗ (ಪ್ರಜ್ವಲ್ ರೇವಣ್ಣ) ಜೈಲಿನಲ್ಲಿದ್ದಾನೆ. ನ್ಯಾಯಾಲಯ ತೀರ್ಪು ನೀಡಿದೆ, ನಾವು ಆ ತೀರ್ಪನ್ನು ಸ್ವೀಕರಿಸಿದ್ದೇವೆ. ಆದರೆ, ಎರಡು ವರ್ಷಗಳಿಂದ ಇರದಿದ್ದ ಮೊಬೈಲ್ ಫೋನ್ ಈಗ ಜೈಲಿನಲ್ಲಿದೆ ಎಂದು ಹೊಸದಾಗಿ ಕಥೆ ಆರಂಭಿಸಿದ್ದಾರೆ. ಪ್ರತಿದಿನ ಒಂದೊಂದು ಸರಣಿ ಬಿಡುಗಡೆ ಮಾಡುತ್ತಿರುವುದು ಏಕೆಂದು ಕೇಳಿದರು.



### 2 ವರ್ಷ ಇರದ ಮೊಬೈಲ್ ಈಗ ಹೇಗೆ ಬಂತು ?

ಎರಡು ವರ್ಷಗಳಿಂದ ಪ್ರಜ್ವಲ್ ಬಳಿ ಇಲ್ಲದ ಮೊಬೈಲ್ ಈಗ ಎಲ್ಲಿಂದ ಬಂತು. ಜೈಲಿನೊಳಗೆ ಅಶ್ಲೀಲ ಚಿತ್ರಗಳು ಹೇಗೆ ಬಂದವು. ಯಾರು ನೀಡಿದರು, ಮೊಬೈಲ್ ಪೂರೈಸಿದವರು ಯಾರೆಂಬ ಪ್ರಶ್ನೆಗಳಿಗೆ ಉತ್ತರ ನೀಡಬೇಕು. ಜೈಲಿನಲ್ಲಿ ಮೊಬೈಲ್ ಇಟ್ಟುಕೊಂಡಿರುವುದು ಯಾರಿಗೂ ಗೊತ್ತಾಗುವುದಿಲ್ಲವೇ, ನಾವು ಪೂರೈಸಿದ್ದೇವೆಯೇ ಎಂದು ಕುಮಾರಸ್ವಾಮಿ ಕೇಳಿದರು.

ಬಿಡದಿ, ನೈಸ್ ಸೇರಿ ವಿವಿಧ ವಿಚಾರಗಳಲ್ಲಿ ನ್ಯಾಯಾಲಯದ ಆದೇಶಗಳು ಬಂದ ಸಂದರ್ಭದಲ್ಲಿ ತಮ್ಮ ಕುಟುಂಬದ ವಿರುದ್ಧ ರಾಜಕೀಯವಾಗಿ ಒತ್ತಡ ಹೇರುವ ಪ್ರಯತ್ನ ನಡೆದಿದೆ. ಒಬ್ಬ ವ್ಯಕ್ತಿಯ ಹೆಸರನ್ನು ಮುಂದಿಟ್ಟುಕೊಂಡು ದೇವೇಗೌಡರ ಕುಟುಂಬದ ಧ್ವನಿಯನ್ನು ಮುಚ್ಚಿಸಲು ಸಾಧ್ಯವಿಲ್ಲ. ಏನೇನು ನಡೆಸಿದ್ದೀರಿ ಎಂಬುದಕ್ಕೆ ಕಾಲವೇ ಉತ್ತರ ಕೊಡುತ್ತದೆ. ಯಾವ ರೀತಿಯಲ್ಲಿ ಏನೇನು ಮಾಡಿದ್ದಾರೆಂಬುದು ನನಗೆ ಗೊತ್ತಿದೆ. ಆ ಹುಡುಗನ ಹೆಸರನ್ನು ಇಟ್ಟುಕೊಂಡು ನಮ್ಮ ಧ್ವನಿಯನ್ನು ಮುಚ್ಚಿಸುತ್ತೀರಾ, ನಿಮ್ಮ ಕೈಯಲ್ಲಿ ನಮ್ಮ ಬಾಯಿ ಮುಚ್ಚಿಸಲು ಸಾಧ್ಯವಿಲ್ಲವೆಂದು ಸವಾಲು ಹಾಕಿದರು.

### ಕಾಂಗ್ರೆಸ್‌ನವರ ವಿರುದ್ಧವೂ ಇದೇ ಕೃತ್ಯ

ಕಾಂಗ್ರೆಸ್ ಪಕ್ಷದಲ್ಲಿ ಎಷ್ಟು ಜನರ ಧ್ವನಿಯನ್ನು ನಿಲ್ಲಿಸಿದ್ದಾರೆಂಬುದು ಎಲ್ಲರಿಗೂ ಗೊತ್ತಿದೆ. ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಸಚಿವರೊಬ್ಬರು 48 ಮಂದಿಯ ಕುರಿತು ಮಾತನಾಡಿದ್ದರು. ಆದರೆ, 24 ಗಂಟೆಯೊಳಗೆ ಆ ವಿಚಾರದಲ್ಲಿ ಮೌನ ವಹಿಸಿದರು. ರಾಜಕಾರಣಿಗಳು, ನ್ಯಾಯಾಧೀಶರು, ಕೇಂದ್ರ ಸಚಿವರು ಹಾಗು ಕೇಂದ್ರದ ನಾಯಕರಿಗೆ ಸಂಬಂಧಿಸಿದ ಮಾಹಿತಿ ಇದೆ ಎಂಬ ರೀತಿಯಲ್ಲಿ ಹೇಳಿಕೆಗಳು ಕೇಳಿ ಬಂದಿದ್ದವು. ನಂತರ ಏಕೆ ಆ ವಿಚಾರವನ್ನು ಕೈಬಿಟ್ಟರೆಂದು ಹೆಚ್.ಡಿ.ಕುಮಾರಸ್ವಾಮಿ ಅವರು ಪ್ರಶ್ನಿಸಿದರು.

ದೇವೇಗೌಡರ ಕುಟುಂಬವನ್ನು ಸರ್ವನಾಶ ಮಾಡುವುದೇ ಕಾಂಗ್ರೆಸ್ ಸರ್ಕಾರದ ಮೊದಲ ಆದ್ಯತೆ ಎಂಬ ರೀತಿಯಲ್ಲಿ ರಾಜಕೀಯವಾಗಿ ಹೇಳಿಕೆಗಳು ಬರುತ್ತಿವೆ. ತಮ್ಮ ವಿರುದ್ಧ ಹಾಗು ಕುಟುಂಬದ ವಿರುದ್ಧ ನಡೆದಿರುವ ಬೆಳವಣಿಗೆಗಳಿಗೆ ತಾವು ಹೆದರುವುದಿಲ್ಲ. ನಿಮ್ಮ ಬಳಿ ಏನೇನು ಇದೆ, ತಂದುಕೊಂಡು ಬನ್ನಿ ಎಂದು ಹೇಳಿದ್ದೀರಿ. ಏನೇನು ತಂದಿದ್ದೀರಿ, ಎಲ್ಲಿಂದ ತಂದಿದ್ದೀರಿ, ಯಾರಿಗೆ ನ್ಯಾಯ ಕೊಟ್ಟಿದ್ದೀರಿ ಎಂದು ಪ್ರಶ್ನಿಸಿದ ಅವರು, ತಮ್ಮ ಕುಟುಂಬದ ವಿರುದ್ಧ ಮಾಡಲಾಗುತ್ತಿರುವ ಆರೋಪಗಳ ಕುರಿತು ಅಸಮಾಧಾನ ವ್ಯಕ್ತಪಡಿಸಿದರು.

ಅತ್ಯಾಚಾರ ಸೇರಿ ಹಲವು ಆರೋಪಗಳನ್ನು ತಮ್ಮ ಕುಟುಂಬದ ವಿರುದ್ಧ ಮಾಡಲಾಗಿದೆ. ಆದರೆ, ತಮ್ಮ ಕುಟುಂಬದಿಂದ ಅನ್ಯಾಯಕ್ಕೊಳಗಾದ ಎಷ್ಟು ಕುಟುಂಬಗಳಿಗೆ ನ್ಯಾಯ ಒದಗಿಸಲಾಗಿದೆ ಎಂಬುದನ್ನು ಹೇಳಲಿ. ಎಷ್ಟು ಹೆಣ್ಣು ಮಕ್ಕಳ ಕುಟುಂಬಗಳನ್ನು ಸರಿಪಡಿಸಿ ಕೊಟ್ಟಿದ್ದೀರಿ. ಆ ಹುಡುಗನಿಂದಲೇ ಎಷ್ಟು ಹೆಣ್ಣುಮಕ್ಕಳ ಮಾನ ಕಾಪಾಡಿದ್ದೀರಿ ಎಂದು ಪ್ರಶ್ನಿಸಿದ ಅವರು, ಇದಕ್ಕೆಲ್ಲ ಹೆದರಿಕೊಂಡು ಹೋಗುವುದಿಲ್ಲ. ನ್ಯಾಯ ಮತ್ತು ಸತ್ಯಕ್ಕೆ ತಲೆಬಾಗುತ್ತೇನೆ. ಆದರೆ, ನಿಮ್ಮಂತೆ ಎಲ್ಲವನ್ನೂ ಬಿಟ್ಟು ದೋಚುವ ಕೆಲಸ ಮಾಡುವುದಿಲ್ಲ. ಎಷ್ಟು ಕುಟುಂಬಗಳನ್ನು ಹಾಳು ಮಾಡಿದ್ದೀರಿ ಎಂಬುದನ್ನು ಬೇಕಾದಷ್ಟು ಹೇಳಬಲ್ಲೆ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು.

## ಜಲ ವಿವಾದ : ಸಿಡ್ಬ್ಲ್ಯುಆರ್‌ಸಿಗೆ ವಿಶೇಷ ಅರ್ಜಿ ಸಲ್ಲಿಕೆ

• ಪ್ರಜೋದಯ ವರದಿ

**ಮಂಡ್ಯ :** ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ, ಕಾವೇರಿ ನೀರು ನಿಯಂತ್ರಣ ಸಮಿತಿಗೆ ಮಂಗಳವಾರ ದಂದೇ ವಿಶೇಷ ಅರ್ಜಿ ಸಲ್ಲಿಸಿ ರಾಜ್ಯದ ನೀರಿನ ವಾಸ್ತವ ಸ್ಥಿತಿಗತಿಯನ್ನು ಮನವರಿಕೆ ಮಾಡಿಕೊಡಲಾಗುವುದು. ಕಾವೇರಿ ಸಮಸ್ಯೆಗೆ ಮೇಕೆದಾಟು ಯೋಜನೆ ಜಾರಿ ಮಾತ್ರ ಶಾಶ್ವತ ಪರಿಹಾರವೆಂದು ಜಲ ಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅವರು ತಿಳಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಲಾಗುತ್ತಿದ್ದು, ಹೇಮಾವತಿ ಜಲಾಶಯದಿಂದ ನೀರು ಹರಿಸಲಾಗುತ್ತಿದೆ. ಆದರೆ, ಕೆಲವೆಡೆ ರೈತರು ನೀರು ತಡೆಯುತ್ತಿರುವುದು ಗಮನಕ್ಕೆ ಬಂದಿದೆ. ಕೆ.ಆರ್. ಪೇಟೆ ಹಾಗೂ ಪಾಂಡವಪುರ ಭಾಗದ ರೈತರು ಸಹಕರಿಸಿ, ಮದ್ದೂರು ಹಾಗೂ ಮಳವಳ್ಳಿ ಭಾಗದ ಕೆರೆಗಳು ತುಂಬಲು ಅವಕಾಶ ಮಾಡಿಕೊಡಬೇಕು. ಅಗತ್ಯವಿದ್ದರೆ ಪೊಲೀಸ್ ಭದ್ರತೆ ಪಡೆದು ನೀರು ಹರಿಸಲಾಗುವುದು ಎಂದರು.

ಮೈಸೂರು ದಸರಾಗಿಂತಲೂ ಪುರಾತನವಾದ ಶ್ರೀರಂಗಪಟ್ಟಣ ದಸರಾವನ್ನು ಈ ಬಾರಿ ಬರಗಾಲದ ಹಿನ್ನಲೆಯಲ್ಲಿ ಅದ್ದೂರಿತನದ ಬದಲು ಸಾಂಪ್ರದಾಯಿಕವಾಗಿ ಆಚರಿಸಲು ತೀರ್ಮಾನಿಸಲಾಗಿದೆ. ದಸರಾ ಆಚರಣೆಗೆ 5 ಕೋ.ರೂ. ಅನುದಾನ ಕೋರಿ ಸಮಿತಿಯು ಮನವಿ ಮಾಡಿದ್ದು, ಶಾಸಕರ ಸಲಹೆಗಳನ್ನು ಪರಿಗಣಿಸಿ ಮುಂದಿನ ಮೂರು ದಿನಗಳಲ್ಲಿ ಉದ್ಘಾಟಕರ ಹೆಸರನ್ನು ಅಂತಿಮಗೊಳಿಸಲಾಗುವುದೆಂದರು.

ಮದ್ದೂರಿನಲ್ಲಿ ನಡೆಯುತ್ತಿರುವ ಗಣೇಶೋತ್ಸವ ವಿಸರ್ಜನಾ ಮೆರವಣಿಗೆಯಲ್ಲಿ ಬಿಜೆಪಿ ನಾಯಕರು ಭಾಗವಹಿಸುತ್ತಿರುವ ಬಗ್ಗೆ ತೀವ್ರ ವಾಗ್ದಾಳಿ ನಡೆಸಿದ ಸಚಿವರು, ರಾಜ್ಯದ ಜನರ ಸಮಸ್ಯೆಗಳ ಬಗ್ಗೆ ಅಧಿವೇಶನ ದಲ್ಲಿ ಚರ್ಚಿಸಲು ಬಾರದ ಬಿಜೆಪಿ ನಾಯಕರು, ಗಣೇಶ ವಿಸರ್ಜನೆ ನೆಪದಲ್ಲಿ ರಾಜಕಾರಣ ಮಾಡಲು ಬರುತ್ತಿದ್ದಾರೆ. ನಮ್ಮ ಜಿಲ್ಲೆಯ ಜನರಿಗೆ ಗಣೇಶನನ್ನು ಹೇಗೆ ವಿಸರ್ಜಿಸಬೇಕು ಎಂಬುದು ಗೊತ್ತಿದೆ. ಮಾತನಾಡಲು ಬೇರೆ ವಿಷಯವಿಲ್ಲದ ಕಾರಣ ಬಿಜೆಪಿ ಇಲ್ಲಿ ರಾಜಕೀಯ ಮಾಡುತ್ತಿದ್ದು, ಅವರಿಗೂ ಸೂಕ್ತ ಪೊಲೀಸ್ ಭದ್ರತೆ ಒದಗಿಸಿ ವಾಪಸ್ ಕಳುಹಿಸಲಾಗುವುದೆಂದು ತಿರುಗೇಟು ನೀಡಿದರು.

## ಸಮಾನ ಅವಕಾಶ ದೊರೆತಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ಅರ್ಥ

### ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸುವುದೇ ಸಂವಿಧಾನದ ಆಶಯ | ಶ್ರೇಯಸ್ ಪಟೇಲ್



• ಪ್ರಜೋದಯ ವರದಿ

**ಹಾಸನ:** ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ, ಸಮಾನ ಅವಕಾಶ ಹಾಗು ಗೌರವ ದೊರೆತಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ಬರುತ್ತದೆ ಎಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದ ಮೂಲಕ ಏನನ್ನಾದರೂ ಸಾಧಿಸಬಹುದೆಂಬುದನ್ನು ಇಡೀ ಜಗತ್ತಿಗೆ ಸಾರಿದವರು ಡಾ.ಬಿ.ಆರ್.ಅಂಬೇಡ್ಕರ್. ಸಮಾಜದಲ್ಲಿ ಯಾವುದೇ ರೀತಿಯ ಅಸಮಾನತೆ ಇರಬಾರದೆಂಬ ಉದ್ದೇಶದಿಂದ ಅವರು ಹೋರಾಟ ನಡೆಸಿದರು. ಇಂದು ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕಲು ಅವರ ಕೊಡುಗೆ ಪ್ರಮುಖ ಕಾರಣವಾಗಿದೆ ಎಂದು ಹೇಳಿದರು.

ಪ್ರಜಾಪ್ರಭುತ್ವವೆಂದರೆ ಕೇವಲ ಮತದಾನ ಮಾಡುವುದು ಅಥವಾ ಚುನಾವಣೆ ನಡೆಸುವುದಷ್ಟೇ ಅಲ್ಲ. ಅದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯೂ ಆಗಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸುವ ವ್ಯವಸ್ಥೆ ರೂಪುಗೊಂಡಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ಬೆಲೆ

» ನಾಲ್ಕನೇ ಪುಟದಲ್ಲಿ

### ಪ್ರಜಾಪ್ರಭುತ್ವಕ್ಕೆ ಗೌರವ ನೀಡಿ : ಡಿ.ಸಿ.

ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಪ್ರಜೆಗಳೇ ತಮ್ಮ ನಾಯಕರನ್ನು ಆಯ್ಕೆ ಮಾಡುತ್ತಾರೆ. ಆದ್ದರಿಂದ ಪ್ರಜಾಪ್ರಭುತ್ವಕ್ಕೆ ಗೌರವ ನೀಡುವುದರ ಜೊತೆಗೆ ಅದರ ಆಶಯಗಳನ್ನು ಪಾಲಿಸುವ ಜವಾಬ್ದಾರಿಯೂ ಪ್ರತಿಯೊಬ್ಬ ನಾಗರಿಕನ ಮೇಲಿದೆ. ಸಮಾನ ಸ್ಥಾನಮಾನ ಹಾಗು ಸಮಾನ ಅವಕಾಶಗಳು ಸಂವಿಧಾನದ ಮೂಲ ಆಶಯಗಳಾಗಿದ್ದು, ಅವುಗಳ ರಕ್ಷಣೆಗಾಗಿ ಪ್ರತಿಯೊಬ್ಬರೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂದು ಜಿಲ್ಲಾಧಿಕಾರಿ ಹೇಳಿದರು.

# ದಾಖಲೆ ಸಮೇತ ಅಕ್ರಮ ಬಯಲು ಮಾಡುವೆ

## ಆಧಾರವಿಲ್ಲದೆ ಯಾವುದೇ ಆರೋಪ ಮಾಡುವುದಿಲ್ಲ | ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ

**ಹೊಳೆನರಸೀಪುರ :** ರಾಜ್ಯದಲ್ಲಿ ನಡೆದಿರುವ ಹಲವು ಅಕ್ರಮಗಳು ಹಾಗು ಸಾವಿರಾರು ಕೋಟಿ ರೂ. ಹಗರಣಗಳ ಕುರಿತು ದಾಖಲೆಗಳನ್ನು ಸಂಗ್ರಹಿಸಿದ್ದು, ಸೂಕ್ತ ಸಮಯದಲ್ಲಿ ಎಲ್ಲವನ್ನೂ ದಾಖಲೆ ಸಮೇತ ನಾಡಿನ ಜನರ ಮುಂದಿಡುತ್ತೇನೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಹೇಳಿದರು.

ಮಂಗಳವಾರ ತಾಲ್ಲೂಕಿನ ಮಾವಿನಕೆರೆ ಬೆಟ್ಟದಲ್ಲಿರುವ ಶ್ರೀ ರಂಗನಾಥಸ್ವಾಮಿ ಸನ್ನಿಧಿಗೆ ಭೇಟಿ ನೀಡಿದ ನಂತರ ತಮ್ಮ ತಾಯಿ ಚನ್ನಮ್ಮ ಅವರ ಸಮಾಧಿಗೆ ತೆರಳಿ ಆಶೀರ್ವಾದ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಎಸ್‌ಸಿ, ಬಿಡದಿ, ನೈಸ್ ಸೇರಿ ಹಲವು ವಿಚಾರಗಳ ಕುರಿತು ಅಮೇರಿಕಾಕ್ಕೆ ತೆರಳುವ ಮುನ್ನವೇ ಮಾತನಾಡಿದ್ದೇನೆ. ಕೆಲವು ವಿಷಯಗಳನ್ನು ಸಾರ್ವಜನಿಕವಾಗಿ ಇಡುತ್ತೇನೆಂದು ಹೇಳಿದ್ದೆ. ನನ್ನ ವಿರೋಧಿಗಳು ಲಘುವಾಗಿ ಎಷ್ಟೇ ಮಾತನಾಡಿದರೂ ನಾನು ಉದ್ವೇಗಕ್ಕೆ ಒಳಗಾಗುವುದಿಲ್ಲ.



"ಯಾವ ಸಮಯದಲ್ಲಿ ಯಾವ ವಿಷಯವನ್ನು ಹೊರಗೆ ತರಬೇಕೆಂಬುದರ ಕುರಿತು ಸಿದ್ಧತೆ ಮಾಡಿಕೊಂಡಿದ್ದೇನೆ. ದಾಖಲೆ ಸಮೇತ ಜನರ ಮುಂದೆ ಬರುತ್ತೇನೆ. ಜನತೆಯೇ ಅಂತಿಮ ತೀರ್ಮಾನ ಮಾಡಬೇಕು. ನಾಲ್ಕು ಅಂಗಗಳೂ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು.

**-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

ದಾಖಲೆಗಳ ಸಮೇತವೇ ನಾಡಿನ ಜನರ ಮುಂದೆ ಎಲ್ಲವನ್ನೂ ಇಡುತ್ತೇನೆಂದರು.

ದಾಖಲೆಗಳ ಆಧಾರವಿಲ್ಲದೆ ಆರೋಪ ಮಾಡುವುದಿಲ್ಲ. ಇದು ತಮ್ಮ ತಂದೆ ಹೆಚ್.ಡಿ.ದೇವೇಗೌಡರಿಂದ ತಮಗೆ ಬಂದ ಬಳುವಳಿ. ಬಿಎಂಐಸಿ ಗುತ್ತಿಗೆದಾರರೊಬ್ಬರು ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿರುವ ಛಾಯಾಚಿತ್ರಗಳನ್ನು ಗಮನಿಸಿದ್ದೇನೆ. ನಮ್ಮ ತಾಯಿ ಬದುಕಿದ್ದ ಸಂದರ್ಭದಲ್ಲಿ ಯಾವ ರೀತಿಯ ಪಿತೂರಿಗಳು ನಡೆದಿವೆ ಎಂಬುದು ಮುಖ್ಯಮಂತ್ರಿಗೂ ಗೊತ್ತಿದೆ. ಒಂದು ವಾಹಿನಿಯವರು ಮೊದಲು ರಾಜ್ಯದ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ, ನಂತರ ಸುದ್ದಿಗೆ ಬೇರೆಯದೇ ರೀತಿಯಲ್ಲಿ ರೂಪ ನೀಡುತ್ತಾರೆ. ಆದರೆ, ಎಲ್ಲವನ್ನೂ ಕಾಲವೇ ನಿರ್ಧರಿಸುತ್ತದೆ. ನನ್ನ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ ಎಂದು ಅವರೇ ನೂರಾರು ಬಾರಿ ಹೇಳಿದ್ದಾರೆ. ಹಾಗಾದರೆ ಷಡ್ಯಂತ್ರ ಮಾಡುತ್ತಿರುವವರು ಯಾರೆಂಬುದನ್ನು ಅವರೇ ಹೇಳಬೇಕೆಂದು ಪ್ರಶ್ನಿಸಿದರು.

ರಾಜ್ಯದಲ್ಲಿ ನಡೆದಿರುವ ಹಲವು ಅಕ್ರಮಗಳು ಹಾಗೂ ಸಾವಿರಾರು ಕೋಟಿ ರೂಪಾಯಿ ಹಗರಣಗಳ ಕುರಿತು ಮಾತನಾಡುವುದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಇಂದು ದೇವರ ಸನ್ನಿಧಿಗೆ ಬಂದು ಆಶೀರ್ವಾದ ಕೇಳಿದ್ದೇನೆ. ಅಂತಿಮವಾಗಿ ತೀರ್ಪು ನೀಡಬೇಕಾದವನು ದೇವರೇ. ನಾನು ಇರ್ಷೆಯಿಂದ

» ನಾಲ್ಕನೇ ಪುಟದಲ್ಲಿ

### ವಿಜಯದಶಮಿಯಲ್ಲಿ ಯುದ್ಧ ಆರಂಭ

ವಿಜಯದಶಮಿ ಸದ್ಯದಲ್ಲೇ ಪ್ರಾರಂಭವಾಗಲಿದೆ. ವಿಜಯದಶಮಿ ಎಂದರೆ ಹಿಂದಿನ ರಾಜಮಹಾರಾಜರ ಕಾಲದಲ್ಲಿ ಯುದ್ಧಕ್ಕೆ ತೆರಳುವ ಕಾಲ. ಅದೇ ರೀತಿ ಈಗಲೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೋರಾಟ ನಡೆಯಬೇಕಿದೆ. ನಾನು ಪ್ರಾರಂಭ ಮಾಡುತ್ತೇನೆ. ಈಗಾಗಲೇ ರಾಜಣ್ಣ ಅವರ ಧ್ವನಿಯನ್ನು ನಿಲ್ಲಿಸಿದ್ದಾರೆ. ರಮೇಶ್ ಜಾರಕಿಹೊಳಿ ಅವರನ್ನು ಮುಗಿಸಿದ್ದಾರೆ. ಸತೀಶ್ ಜಾರಕಿಹೊಳಿ ಅವರು ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಹೇಳುತ್ತಿದ್ದರು. ಅವರನ್ನು ಹೇಗೆ ಮುಗಿಸಬೇಕೆಂಬುದಕ್ಕೆ ಸಿದ್ಧತೆ ಮಾಡಿಕೊಂಡರು. ನಾಗೇಂದ್ರ ಅವರ ವಿಚಾರದಲ್ಲೂ ಯಾವ ರೀತಿಯಲ್ಲಿ ನಡೆಯಿತು ಎಂಬುದು ಬೇಕಾದಷ್ಟು ಇದೆ ಎಂದು ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

## ಇ-ಕೆವೈಸಿಗೆ ಸರ್ವರ್ ಸಮಸ್ಯೆ : ಗ್ರಾಹಕರ ಪರದಾಟ

• ಪ್ರಜೋದಯ ವರದಿ

- ಹೊರ ಜಿಲ್ಲೆ, ರಾಜ್ಯಗಳಿಂದ ಬಂದರೂ ಕೆವೈಸಿ ಆಗದೆ ಅತಂತ್ರ
- ಹೆಚ್ಚುವರಿ ಕೌಂಟರ್ ತೆರೆಯಲು ಒತ್ತಾಯ

**ಅರೇಹಳ್ಳಿ:** ಪಡಿತರ ಚೀಟಿಗಳಲ್ಲಿರುವ ಅರ್ಹ ಫಲಾನುಭವಿಗಳನ್ನು ಗುರುತಿಸಿ ನಕಲಿ ಹಾಗು ದ್ವಂದ್ವ ಪಡಿತರ ಚೀಟಿಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಆಹಾರ ಇಲಾಖೆ ಕೈಗೊಂಡಿರುವ ಇ-ಕೆವೈಸಿ ಪ್ರಕ್ರಿಯೆ ಇದೀಗ ಸರ್ವರ್ ಸಮಸ್ಯೆಯಿಂದ ಗ್ರಾಹಕರಿಗೆ ತಲೆನೋವಾಗಿ ಪರಿಣಮಿಸಿದೆ.

ಪಡಿತರ ಚೀಟಿಗೆ ಇ-ಕೆವೈಸಿ ಮಾಡಿಸಿಕೊಳ್ಳಲು ಅರೇಹಳ್ಳಿ ಪಟ್ಟಣದ ನ್ಯಾಯಬೆಲೆ ಅಂಗಡಿಗಳಿಗೆ ತೆರಳುತ್ತಿರುವ ಫಲಾನುಭವಿಗಳು ಗಂಟೆಗಟ್ಟಲೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ವರ್ ನಿಧಾನಗತಿ ಹಾಗು ಪದೇಪದೇ ಉಂಟಾಗುತ್ತಿರುವ ತಾಂತ್ರಿಕ ದೋಷದಿಂದ ಹಲವು ಬಾರಿ ಪ್ರಯತ್ನಿಸಿದರೂ ಇ-ಕೆವೈಸಿ ಪೂರ್ಣಗೊಳ್ಳದೆ ಗ್ರಾಹಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಪಟ್ಟಣದ ನ್ಯಾಯಬೆಲೆ ಅಂಗಡಿಯೊಂದರಲ್ಲೇ ಸುಮಾರು 2 ಸಾವಿರ ಪಡಿತರ ಚೀಟಿಗಳಿದ್ದು, ದಿನಕ್ಕೆ ಸರಾಸರಿ 30 ಪಡಿತರ ಚೀಟಿಗಳ ಇ-ಕೆವೈಸಿ ಮಾಡಲಾಗುತ್ತಿದೆ. ಇದೇ ವೇಗದಲ್ಲಿ ಮುಂದುವರಿದರೆ ಸಂಪೂರ್ಣ ಪ್ರಕ್ರಿಯೆ ಪೂರ್ಣಗೊಳಿಸಲು ಕನಿಷ್ಠ ಎರಡು ತಿಂಗಳು ಬೇಕಾಗುತ್ತದೆ. ಆದರೆ, ಸೆಪ್ಟೆಂಬರ್ ಅಂತ್ಯದೊಳಗೆ ಇ-ಕೆವೈಸಿ ಪೂರ್ಣಗೊಳಿಸುವಂತೆ

» ನಾಲ್ಕನೇ ಪುಟದಲ್ಲಿ



## ವಿದ್ಯುತ್ ಅವಘಡ ಸ್ಥಳಕ್ಕೆ ಶ್ರೇಯಸ್ ಭೇಟಿ

• ಪ್ರಜೋದಯ ವರದಿ

**ಹಾಸನ:** ನಗರದ ಸಂತೇಪೇಟೆಯಲ್ಲಿರುವ ಕೆಪಿಟಿಸಿಎಲ್‌ನ 220/66 ಕೆ.ವಿ. ಪ್ರಮುಖ ಸ್ವೀಕರಣಾ ಕೇಂದ್ರದಲ್ಲಿ ಸಂಭವಿಸಿದ ಅಗ್ನಿ ಅವಘಡದ ಸ್ಥಳಕ್ಕೆ ಸಂಸದ ಶ್ರೇಯಸ್ ಪಟೇಲ್ ಅವರು ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಗ್ನಿ ಅವಘಡದ ಹಿನ್ನಲೆ ಸ್ಥಳದಲ್ಲಿದ್ದ ಸೆಸ್ಕಾಂ ಅಧಿಕಾರಿಗಳಿಂದ ಘಟನೆಯ ಕುರಿತು ಮಾಹಿತಿ ಪಡೆದ ಅವರು, ಕೈಗೊಂಡಿರುವ ತುರ್ತು ಕ್ರಮಗಳು ಹಾಗು ಪ್ರಸ್ತುತ ವಿದ್ಯುತ್ ಸರಬರಾಜಿನ ಸ್ಥಿತಿಗತಿಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ, ಅಗ್ನಿ ಅವಘಡ ಸಂಭವಿಸಿದ ತಕ್ಷಣ ಅಗ್ನಿಶಾಮಕ ಸಿಬ್ಬಂದಿ ಹಾಗೂ ತಾಂತ್ರಿಕ ತಂಡಗಳು ಕಾರ್ಯಪ್ರವೃತ್ತರಾಗಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಮಾಹಿತಿ ಪಡೆದುಕೊಂಡರು.



ಘಟನೆಗೆ ಕಾರಣವೇನೆಂಬುದನ್ನು ಸಮಗ್ರವಾಗಿ ಪರಿಶೀಲಿಸಿ, ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ ಅವರು, ಸಾರ್ವಜನಿಕರಿಗೆ ತೊಂದರೆಯಾಗದಂತೆ ವಿದ್ಯುತ್ ಸರಬರಾಜನ್ನು ಸಾಧ್ಯವಾದಷ್ಟು ಶೀಘ್ರದಲ್ಲಿ ಸಹಜ ಸ್ಥಿತಿಗೆ ತರಲು ಕ್ರಮವಹಿಸುವಂತೆ ನಿರ್ದೇಶನ ನೀಡಿದರು.

## ಸೆ.19 ರಂದು ಪ್ರಜಾಸೇವೆ ಆಂದೋಲನ ಸಭೆ

• ಪ್ರಜೋದಯ ವರದಿ

**ಹಾಸನ :** ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ ಶಿವಲಿಂಗೇಗೌಡ ಅವರ ಅಧ್ಯಕ್ಷತೆಯಲ್ಲಿ ಸಕಲೇಶಪುರ ತಾಲ್ಲೂಕಿನ ಕಚೇರಿ ಆವರಣದಲ್ಲಿ ಸೆ.19 ರಂದು ಬೆಳಿಗ್ಗೆ 10.30 ಕ್ಕೆ ಪ್ರಜಾಸೇವೆ ಆಂದೋಲನ ಸಭೆಯನ್ನು ಆಯೋಜಿಸಿದ್ದು, ಖುದ್ದು ಜನರ ಅಹವಾಲುಗಳನ್ನು ಸ್ವೀಕರಿಸಲ್ಲಿದ್ದಾರೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದ್ದಾರೆ.

## ಸೆ.17 ರಂದು ಕನ್ನಡ ಸಾಹಿತ್ಯದಲ್ಲಿ ಕಾಡು ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ :** ಕನ್ನಡ ವಿಭಾಗ, ಎ.ವಿ.ಕಾಂತಮ್ಮ ಮಹಿಳಾ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಸೆ.17 ರಂದು ಬೆಳಿಗ್ಗೆ 11-30ಕ್ಕೆ ಕಾಲೇಜಿನ ಸಭಾ ಭವನದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯದಲ್ಲಿ ಕಾಡು ಕಾರ್ಯಕ್ರಮವನ್ನು ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಮಂಡಳಿ ಸಂಚಾಲಕ ಬಸವರಾಜ ಕಲ್ಗುಡಿ ಅವರು ಉದ್ಘಾಟಿಸುವರು. ಕಾಲೇಜು, ಉಪಾಧ್ಯಕ್ಷ ಅರ್ಜುನ್ ಗುರುದೇವ್ ಹಾಗೂ ಎಂಟಿಇಎಸ್ ಕಾರ್ಯದರ್ಶಿ ಜಿ.ಟಿ.ಕುಮಾರ್ ಅವರು ಗೌರವ ಅತಿಥಿಗಳಾಗಿ ಭಾಗವಹಿಸುವವರು. ಎಂಟಿಇಎಸ್ ಅಧ್ಯಕ್ಷ ಬಿ.ಆರ್.ಗುರುದೇವ್ ಅವರು ಅಧ್ಯಕ್ಷೀಯ ನುಡಿಗಳನ್ನು ನುಡಿಯಲ್ಲಿದ್ದಾರೆ.

## ಕೆರೆಯಲ್ಲಿ ಮುಳುಗಿ ಇಬ್ಬರು ಮೃತ



• ಪ್ರಜೋದಯ ವರದಿ

**ಹೊಳೆನರಸೀಪುರ:** ಜಾನುವಾರುಗಳ ಮೈ ತೊಳೆಯಲು ಕೆರೆಗೆ ಇಳಿದಿದ್ದ ಇಬ್ಬರು ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬಂಡಿಶೆಟ್ಟಿಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಕೆಂಗೇಗೌಡ (60), ಕುಮಾರ (30) ಅವರು ಸಾವನ್ನಪ್ಪಿದ್ದಾರೆ.

ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಕೆಂಗೇಗೌಡ ಹಾಗು ಕುಮಾರ ದನಕರುಗಳನ್ನು ಮೈ ತೊಳೆಯಲು ಗ್ರಾಮದ ಕೆರೆಗೆ ಇಳಿದಿದ್ದರು. ಈ ವೇಳೆ ಆಕಸ್ಮಿಕವಾಗಿ ನೀರಿನಲ್ಲಿ ಮುಳುಗಿ ಇಬ್ಬರೂ ಮೃತಪಟ್ಟಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಅಗ್ನಿಶಾಮಕ ದಳದ ಸಿಬ್ಬಂದಿ ಕೆರೆಯಲ್ಲಿದ್ದ ಮೃತದೇಹಗಳನ್ನು ಹೊರ ತೆಗೆದರು. ನಂತರ ವೈದ್ಯಕೀಯ ಮರಣೋತ್ತರ ಪರೀಕ್ಷೆ ನಡೆಸಿದರು. ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

### ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಹೆಚ್.ಪಿ.ಸ್ವರೂಪ್ ಸಲಹೆ

# ಯುವ ಪೀಳಿಗೆ ಪ್ರಜಾಪ್ರಭುತ್ವದ ಮೌಲ್ಯ ಅರಿಯಲಿ

• ಪ್ರಜೋದಯ ವರದಿ

**ಹಾಸನ:** ಪ್ರಜಾಪ್ರಭುತ್ವದ ಮೌಲ್ಯಗಳು, ಸಂವಿಧಾನ ನಾಗರಿಕರಿಗೆ ನೀಡಿರುವ ಹಕ್ಕುಗಳು ಹಾಗು ಪ್ರತಿಯೊಬ್ಬರ ಕರ್ತವ್ಯಗಳ ಕುರಿತು ಯುವ ಪೀಳಿಗೆಯಲ್ಲಿ ಹೆಚ್ಚಿನ ಅರಿವು ಮೂಡಿಸುವ ಅಗತ್ಯವಿದೆ ಎಂದು ಶಾಸಕ ಹೆಚ್.ಪಿ. ಸ್ವರೂಪ್ ಅವರು ಹೇಳಿದರು.

ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಡಾ. ಬಿ. ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಪ್ರಜಾಪ್ರಭುತ್ವದ ಆಶಯಗಳನ್ನು ಪ್ರತಿಯೊಬ್ಬ ನಾಗರಿಕನಿಗೂ ತಲುಪಿಸುವುದು ಇಂದಿನ ಅಗತ್ಯವಾಗಿದೆ. ವಿಶ್ವದ ಹಲವು ರಾಷ್ಟ್ರಗಳು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅನುಸರಿಸುತ್ತಿದ್ದು, ಜನರ ಸಕ್ರಿಯ ಪಾಲ್ಗೊಳ್ಳುವಿಕೆಯೇ ಈ ವ್ಯವಸ್ಥೆಯ ಪ್ರಮುಖ ಶಕ್ತಿಯಾಗಿದೆ ಎಂದು ತಿಳಿಸಿದರು.



ಪ್ರತಿವರ್ಷ ಸೆ.15ರಂದು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಆಚರಿಸುವ ಮೂಲಕ ಪ್ರಜಾಪ್ರಭುತ್ವದ ಮಹತ್ವ, ಮೌಲ್ಯಗಳು ಹಾಗೂ ನಾಗರಿಕರ ಹಕ್ಕುಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ವಿಶೇಷವಾಗಿ ಯುವಜನರು ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ಸಮಗ್ರ ಅರಿವು ಹೊಂದಬೇಕು. ಚುನಾವಣೆಗಳು ಹೇಗೆ ನಡೆಯುತ್ತವೆ, ಜನಪ್ರತಿನಿಧಿಗಳು ಹೇಗೆ ಆಯ್ಕೆಯಾಗುತ್ತಾರೆ, ಸರ್ಕಾರಗಳು ಯಾವ ರೀತಿಯಲ್ಲಿ ನಿರ್ಧಾರಗಳನ್ನು ಕೈಗೊಳ್ಳುತ್ತವೆ ಹಾಗೂ ಸಂವಿಧಾನ ನಾಗರಿಕರಿಗೆ ನೀಡಿರುವ ಹಕ್ಕುಗಳೇನೆಂಬುದನ್ನು ಯುವ ಪೀಳಿಗೆಗೆ ತಿಳಿಸಬೇಕು. ಹಕ್ಕುಗಳ ಜೊತೆಗೆ ಕರ್ತವ್ಯಗಳ ಬಗ್ಗೆಯೂ ಅರಿವು ಮೂಡಿಸುವುದು ಅಗತ್ಯ ಎಂದು ತಿಳಿಸಿದರು.

"ಸಾರ್ವಜನಿಕರು, ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗು ವಿವಿಧ ಸಮುದಾಯಗಳ ಮುಖಂಡರು ಒಟ್ಟಾಗಿ ಕಾರ್ಯ ನಿರ್ವಹಿಸಿದಾಗ ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತಷ್ಟು ಬಲಪಡುತ್ತವೆ.

**- ಶುಭಂ ಶುಕ್ಲಾ, ಜಿ.ಪಂ. ಸಿಇಒ**

ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಅತ್ಯಂತ ಬಲಿಷ್ಠವಾಗಿದ್ದು, ದೇಶದ ಸಂವಿಧಾನವೇ ಅದರ ಪ್ರಮುಖ ಆಧಾರವಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ರೂಪುಗೊಂಡ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಸಮಾನತೆ, ಸ್ವಾತಂತ್ರ್ಯ ಹಾಗು ನ್ಯಾಯದ ಆಶಯಗಳನ್ನು ನೀಡಿದೆ. ಸಂವಿಧಾನದ ಮೌಲ್ಯಗಳನ್ನು ಗೌರವಿಸಿ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಜನರಿಂದ, ಜನರಿಗಾಗಿ ನಡೆಯುವ ವ್ಯವಸ್ಥೆಯೇ ಪ್ರಜಾಪ್ರಭುತ್ವ. ಅದರ ಆಶಯಗಳು ಕೇವಲ ಚುನಾವಣೆಗಳಿಗೆ ಸೀಮಿತವಾಗದೆ, ಜನರ ದೈನಂದಿನ ಬದುಕಿನಲ್ಲಿಯೂ ಪ್ರತಿಫಲಿಸಬೇಕು. ಸಮಾಜದ ಎಲ್ಲ ವರ್ಗಗಳಿಗೂ ಸಮಾನ ಅವಕಾಶ ಹಾಗೂ ನ್ಯಾಯ ದೊರೆಯುವಂತೆ ಮಾಡುವ ಮೂಲಕ ಪ್ರಜಾಪ್ರಭುತ್ವದ ಆಶಯಗಳನ್ನು ಸಾಕಾರಗೊಳಿಸಬೇಕು. ಪ್ರಜಾ ಪ್ರಭುತ್ವದ ಮೌಲ್ಯಗಳನ್ನು ಮತ್ತಷ್ಟು ಬಲ

» ನಾಲ್ಕನೇ ಪುಟದಲ್ಲಿ

## ನಾಳೆ ವಿಶ್ವಕರ್ಮ ಜಯಂತಿ

• ಪ್ರಜೋದಯ ವರದಿ

**ಹಾಸನ :** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸೆ.17 ರಂದು ಬೆಳಿಗ್ಗೆ 11 ಗಂಟೆಗೆ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಹೆಚ್.ಪಿ.ಸ್ವರೂಪ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಪಟೇಲ್, ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕರಾದ ಸಿ.ಎನ್. ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರಾದ ಅಧ್ಯಕ್ಷ ಪಟೇಲ್ ಶಿವಪ್ಪ, ಸರ್ಕಾರಿ ಕಲಾ ಮತ್ತು ವಾಣಿಜ್ಯ ಸ್ನಾತಕೋತ್ತರ ಸ್ವಾಯತ್ತ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಎಂ.ಮಹೇಶ್ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಲಿದ್ದಾರೆ.

# ಕುರುಚಲು ಕಾಡಿನ ಮಡಿಲಲ್ಲಿ ಕಿತ್ತಳೆ ತುದಿ ಚಿಟ್ಟೆಗಳ ಪ್ರಣಯ

**“ಸುತ್ತಲೂ ಹರಡಿದ್ದ ಪೊದೆಗಳ ನಡುವೆ, ಒಂದು ಸಣ್ಣ ಕಡ್ಡಿಯ ಮೇಲೆ ನಿಶ್ಚಲವಾಗಿ ಕುಳಿತಿದ್ದವು ಆ ಜೋಡಿಗಳು. ಅವು ಸಾಧಾರಣ ಹಾರಾಡುವ ಕೀಟಗಳಲ್ಲ; ಪ್ರೇಮದ ಪರಾಕಾಷ್ಠೆಯಲ್ಲಿದ್ದ ಕಿತ್ತಳೆ-ತುದಿ ಚಿಟ್ಟೆಗಳು. ಅವುಗಳ ರೆಕ್ಕೆಗಳ ಮೇಲಿನ ಆ ಕಿತ್ತಳೆ ಬಣ್ಣದ ವಿನ್ಯಾಸ, ಬಿಳಿಯ ಬಣ್ಣದೊಂದಿಗೆ ಬೆರೆತು ಪ್ರಕೃತಿಯ ಕುಸುರಿ ಕೆಲಸದಂತೆ ಕಾಣುತ್ತಿತ್ತು**



ಮಳೆಗಾಲ ನಿಧಾನವಾಗಿ ವಿದಾಯ ಹೇಳಿ, ಚಳಿಗಾಲದ ಮಂಜು ಮುಸುಕುವ ಮುಂಜಾವಿನ ಆ ದಿನಗಳು ಪ್ರಕೃತಿ ಆರಾಧಕರಿಗೆ ಹಬ್ಬದಂತೆ. ಕೊರಳಲ್ಲಿ ಮ್ಯಾಕ್ರೋಲೆನ್ಸ್ ಅಳವಡಿಸಿದ ಕ್ಯಾಮರಾ, ಮನದಲ್ಲಿ ಅದ್ಯಾವುದೋ ಅಪರೂಪದ ಕ್ಷಣವನ್ನು ಸೆರೆ ಹಿಡಿಯುವ ತವಕ. ಕಾಕೋಳದ ಕುರುಚಲು ಕಾಡಿನ ಆ ಗುಡ್ಡಗಾಡು ಪ್ರದೇಶದಲ್ಲಿ ಕಲ್ಲು-ಮುಳ್ಳುಗಳ ಹಾದಿಯನ್ನು ತುಳಿಯುತ್ತಾ ಸಾಗುತ್ತಿದ್ದಾಗ, ಪ್ರಕೃತಿ ನನಗಾಗಿ ಒಂದು ಸುಂದರ ದೃಶ್ಯವನ್ನು ಕಾಯ್ದಿರಿಸಿತ್ತು.

ಸುತ್ತಲೂ ಹರಡಿದ್ದ ಪೊದೆಗಳ ನಡುವೆ, ಒಂದು ಸಣ್ಣ ಕಡ್ಡಿಯ ಮೇಲೆ ನಿಶ್ಚಲವಾಗಿ ಕುಳಿತಿದ್ದವು ಆ ಜೋಡಿಗಳು. ಅವು ಸಾಧಾರಣ ಹಾರಾಡುವ ಕೀಟಗಳಲ್ಲ; ಪ್ರೇಮದ ಪರಾಕಾಷ್ಠೆಯಲ್ಲಿದ್ದ ಕಿತ್ತಳೆ-ತುದಿ ಚಿಟ್ಟೆಗಳು. ಅವುಗಳ ರೆಕ್ಕೆಗಳ ಮೇಲಿನ ಆ ಕಿತ್ತಳೆ ಬಣ್ಣದ ವಿನ್ಯಾಸ, ಬಿಳಿಯ ಬಣ್ಣದೊಂದಿಗೆ ಬೆರೆತು ಪ್ರಕೃತಿಯ ಕುಸುರಿ ಕೆಲಸದಂತೆ ಕಾಣುತ್ತಿತ್ತು. ಮತ್ತೊಂದು ಆಂಗಲ್‌ನಿಂದ ಫೋಟೋ ಕ್ಲಿಕ್ಕಿಸಬೇಕೆಂದು ಸಜ್ಜಾಗುವಷ್ಟರಲ್ಲಿ ಅದೊಂದು ಜಾದೂ ನಡೆದಂತಾಯಿತು!

ಕಣ್ಣೆದುರೇ ಇದ್ದ ಚಿಟ್ಟೆಗಳು ಮಾಯವಾಗಿ, ಕೇವಲ ಬರಿ ಕಡ್ಡಿ ಮಾತ್ರ ಉಳಿದಿತ್ತು. ಒಂದು ಕ್ಷಣ ಗಾಬರಿಯಾಗಿ ಸುತ್ತಲೂ ಕಣ್ಣಾಡಿಸಿದಾಗ, ಸ್ವಲ್ಪ ದೂರದಲ್ಲಿದ್ದ ಉತ್ರಾಣಿ(ಉತ್ತರಾಣಿ) ಗಿಡದ ಹೂಗೊಂಚಲಿನ ಮೇಲೆ ಈ ಜೋಡಿಗಳು ಆಸೀನವಾಗಿದ್ದವು. ಪ್ರಕೃತಿಯ ಈ ಸಣ್ಣ ಚಿಟ್ಟೆಗಳ ಏಕಾಗ್ರತೆಗೆ ಮೆಚ್ಚುಗೆಯಾಯಿತು. ಅವುಗಳನ್ನು ಬೆನ್ನಟ್ಟಲು ನಾನು ಎದ್ದು ನಿಲ್ಲಲಿಲ್ಲ; ಬದಲಾಗಿ ನೆಲದ ಮೇಲೆಯೇ ತೆವಳುತ್ತಾ ಮುಂದುವರಿದೆ. ಮೈಗೆ ಹತ್ತುವ ಮಣ್ಣು, ಚುಚ್ಚುವ ಮುಳ್ಳುಗಳ ಅರಿವಿರಲಿಲ್ಲ. ಉತ್ರಾಣಿ ಹೂವಿನ ಆ ನೇರಳೆ-ಹಸಿರು ಬಣ್ಣದ ಹಿನ್ನೆಲೆಯಲ್ಲಿ, ಚಿಟ್ಟೆಗಳ ಬಿಳಿ ಮತ್ತು ಕಿತ್ತಳೆ ಬಣ್ಣದ ಸಂಗಮವು ಅದ್ಭುತವಾಗಿ ಗೋಚರಿಸುತ್ತಿತ್ತು. ತೆವಳಿಕೊಂಡು ಸಾಗಿ,



ಸರಿಯಾದ ಚೌಕಟ್ಟನ್ನು ಹುಡುಕಿ ಆ ಕ್ಷಣಗಳನ್ನು ಸೆರೆಹಿಡಿದಾಗ ಆದ ತೃಪ್ತಿ ಅಪಾರ. ಅವುಗಳ ಮಿಲನೋತ್ಸವಕ್ಕೆ ಭಂಗ ಬರಬಾರದೆಂಬ ಕಾಳಜಿ ಒಂದೆಡೆಯಾದರೆ, ಆ ಕ್ಷಣವನ್ನು ಅಷ್ಟೇ ಅದ್ಭುತವಾಗಿ ಸೆರೆಹಿಡಿಯಬೇಕೆಂಬ ಹಂಬಲ ಇನ್ನೊಂದೆಡೆ. ಬೇರೆ ದಾರಿಯಿಲ್ಲದೆ, ಆ ಒರಟು ನೆಲದ ಮೇಲೆ ಅಂಗಾತ ಮಲಗಿ ಕ್ಯಾಮರಾದ ಕಣ್ಣಿನ ಮೂಲಕ ಅವುಗಳ ಪ್ರೇಮಲೋಕವನ್ನು ಇಣುಕಿದೆ.

ಕ್ಲಿಕ್... ಕ್ಲಿಕ್... ಶಟರ್ ಸದ್ದು ಕುರುಚಲು ಕಾಡಿನ ಗಾಳಿಯಲ್ಲಿ ಲೀನವಾಯಿತು. ಅವುಗಳ ಈ ಸುಂದರ ಕ್ರಿಯೆಗೆ ಇನ್ನು ಅಡ್ಡಿಪಡಿಸುವುದು ಸರಿಯಲ್ಲವೆಂದು ಭಾವಿಸಿ, ಮೆಲ್ಲನೆ ಎದ್ದು ಕ್ಯಾಮರಾ ಹಿಡಿದು ಮುಂದೆ ಸಾಗಿದೆ. ಹಸಿರು ಬಣ್ಣದ ಹಿನ್ನೆಲೆಯಲ್ಲಿ ನಡೆದ ಆ ಸಣ್ಣ ಜೀವಿಗಳ ಮಿಲನೋತ್ಸವ, ನನ್ನ ಕ್ಯಾಮರಾದಲ್ಲಿ ಮಾತ್ರವಲ್ಲದೆ ಮನಸ್ಸಿನಲ್ಲೂ ಅಚ್ಚಳಿಯದಂತೆ ಉಳಿಯಿತು.

ಒಬ್ಬ ವನ್ಯಜೀವಿ ಛಾಯಾಗ್ರಾಹಕನಿಗೆ ಸಿಗುವ ದೊಡ್ಡ ಬಹುಮಾನವೆಂದರೆ ಪ್ರಕೃತಿಯ ಇಂತಹ ರಹಸ್ಯ ಕ್ಷಣಗಳು. ಕಲ್ಲು-ಮುಳ್ಳಿನ ಹಾದಿಯಲ್ಲಿದ್ದ ಆ ಸಾಹಸಮಯ ಪಯಣ, ಈ ಸುಂದರ ಚಿತ್ರಗಳ ಮೂಲಕ ಸಾರ್ಥಕವಾಯಿತು. ಇವನ್ನು ಕಿತ್ತಳೆ ತುದಿ ಚಿಟ್ಟೆಗಳೆಂದು ಕರೆಯುತ್ತಾರೆ. ಪ್ಲೇನ್ ಆರೆಂಜ್-ಟಿಪ್ ಅಥವಾ ಸಲ್ಫರ್ ಆರೆಂಜ್-ಟಿಪ್ ಎಂದು ಇಂಗ್ಲೀಷ್‌ನಲ್ಲಿ ಕರೆದು, ವೈಜ್ಞಾನಿಕವಾಗಿ ಕ್ಯಾಲೋಟಿಸ್ ಅರೋರಾ ಎಂದು ಹೆಸರಿಸಿ, ಸಂಧಿಪದಿಗಳ, ಕೀಟ ವರ್ಗದ, ಲೆಪಿಡೋಪ್ಟೆರಾ ಗಣದ, ಬಿಳಿ-ಹಳದಿ ಚಿಟ್ಟೆಗಳ ಪೈಯರಿಡೇ ಕುಟುಂಬಕ್ಕೆ ಸೇರಿಸಲಾಗಿದೆ.

ಇವು ಮಧ್ಯಮ ಗಾತ್ರದ ಚಿಟ್ಟೆಗಳು. ಇವುಗಳ ರೆಕ್ಕೆಗಳ ಅಗಲ ಸಾಮಾನ್ಯವಾಗಿ 35-40 ಮಿ.ಮೀ. ಇರುತ್ತದೆ. ಇವುಗಳ ದೇಹವು ಕಿರಿದಾಗಿದ್ದು, ಹಾರಾಟಕ್ಕೆ ಪೂರಕವಾದ ಹಗುರವಾದ ತೂಕವನ್ನು ಹೊಂದಿರುತ್ತವೆ. ಹೊಟ್ಟೆಯ ಭಾಗ ಉದ್ದವಾಗಿದೆ. ಸಂಯುಕ್ತ ಕಣ್ಣುಗಳಿದ್ದು ಇವು ಸಾವಿರಾರು ಸಣ್ಣ ಮಸೂರಗಳಿಂದ ಮಾಡಲ್ಪಟ್ಟಿವೆ. ಇವುಗಳಿಗೆ ಮನುಷ್ಯರಿಗಿಂತ ವೇಗವಾಗಿ ಚಲನೆಯನ್ನು ಗುರುತಿಸುವ ಸಾಮರ್ಥ್ಯವಿದೆ. ಅದಕ್ಕಾಗಿಯೇ ನೀವು ಹತ್ತಿರ ಹೋದಾಗ ಅವು ತಕ್ಷಣವೇ ಹಾರಿ ಹೋಗುತ್ತವೆ.

ಇವುಗಳಿಗೆ ನಾವು ಕಾಣದ ಅಲ್ಟ್ರಾವೈಲೆಟ್ ಕಿರಣಗಳನ್ನು ನೋಡುವ ಶಕ್ತಿಯೂ ಇದೆ. ತಲೆಯ ಮುಂಭಾಗದಲ್ಲಿರುವ ಎರಡು ಉದ್ದನೆಯ ಕಡ್ಡಿಯಂತಹ ರಚನೆಗಳೇ ಇವುಗಳ ಗ್ರಹಣಾಂಗಗಳು. ಇವುಗಳ ತುದಿಯು ಸ್ವಲ್ಪ ದಪ್ಪವಾಗಿದ್ದು, ಇದು ಈ ಕುಟುಂಬದ ಚಿಟ್ಟೆಗಳ ವೈಶಿಷ್ಟ್ಯ. ಇವು ಗಾಳಿಯಲ್ಲಿರುವ ವಾಸನಗಂಧವನ್ನು ಮತ್ತು ತೇವಾಂಶವನ್ನು ಪತ್ತೆಹಚ್ಚಲು ಸಹಾಯ ಮಾಡುತ್ತವೆ.

ಮಿಲನದ ಸಮಯದಲ್ಲಿ ಸಂಗಾತಿಯನ್ನು ಪತ್ತೆ ಹಚ್ಚಲು ಇವುಗಳ ಪಾತ್ರ ಬಹಳ ದೊಡ್ಡದು. ರೆಕ್ಕೆಗಳ ಮೇಲ್ಭಾಗವು ಬಿಳಿಯಾಗಿದ್ದು, ಮುಂಭಾಗದ ರೆಕ್ಕೆಯ ತುದಿ ಕಿತ್ತಳೆ ಬಣ್ಣದಿಂದ ಕೂಡಿರುತ್ತದೆ. ಅದರ ಮೇಲೆ ಕಪ್ಪು ಬಣ್ಣದ ಸಣ್ಣ ಮಚ್ಚೆ ಇದೆ. ರೆಕ್ಕೆಯ ಕೆಳಭಾಗವು ಬಿಳಿ ಬಣ್ಣದ ಮೇಲೆ ಹಳದಿ ಅಥವಾ ಕಂದು ಬಣ್ಣದ ಮಚ್ಚೆಗಳಿವೆ. ಇದು ಕಲ್ಲು ಅಥವಾ ಒಣಗಿದ ಎಲೆಗಳ ಮೇಲೆ ಕುಳಿತಾಗ ಅವು ಪರಿಸರದೊಂದಿಗೆ ಒಂದಾಗಲು ಸಹಾಯ ಮಾಡುತ್ತದೆ. ರೆಕ್ಕೆಯ ತುದಿಯಲ್ಲಿರುವ ಕಿತ್ತಳೆ ಬಣ್ಣವು ಶತ್ರುಗಳಿಗೆ (ಹಕ್ಕಿಗಳಿಗೆ) ಒಂದು ಎಚ್ಚರಿಕೆಯ ಸಂಕೇತವೂ ಹೌದು.

ತಲೆ ಮತ್ತು ಎದೆಯ ಭಾಗದಲ್ಲಿ ಸಣ್ಣ ಸಣ್ಣ ಬಿಳಿ ಅಥವಾ ಬೂದು ಬಣ್ಣದ ಕೂದಲುಗಳಿರುವುದನ್ನು ಇವು ಅವುಗಳ ದೇಹದ ಉಷ್ಣತೆಯನ್ನು ಕಾಯ್ದುಕೊಳ್ಳಲು ನೆರವಾಗುತ್ತವೆ. ಅವುಗಳ ಮುಖದ ಹತ್ತಿರ ಸುರುಳಿ ಸುತ್ತಿದ ಅಥವಾ ಸಣ್ಣ ದಾರದಂತಹ ಅಂಗವೇ ಅವುಗಳ ಸೊಂಡಿಲು. ಹೂವಿನಿಂದ ಜೇನು ಹೀರುವಾಗ ಇದನ್ನು ಉದ್ದವಾಗಿ ಚಾಚುತ್ತವೆ, ಉಳಿದ ಸಮಯದಲ್ಲಿ ಸುರುಳಿ ಸುತ್ತಿಟ್ಟುಕೊಳ್ಳುತ್ತವೆ. ಮಿಲನ ಕ್ರಿಯೆ ಮುಗಿದ ನಂತರ, ಹೆಣ್ಣು ಚಿಟ್ಟೆಯು ಮೊಟ್ಟೆಗಳನ್ನು ಇಡಲು ಸೂಕ್ತವಾದ ಅತಿಥೇಯ ಸಸ್ಯವಾದ ಶಿಗಡಿ ಗಿಡವನ್ನು ಹುಡುಕಿಕೊಂಡು ಹೋಗುತ್ತದೆ. ಇವು ತಮ್ಮ ಮರಿಗಳಿಗೆ ಆಹಾರವಾಗಬಲ್ಲ ಗಿಡಗಳ ಮೇಲೆ ಮಾತ್ರ ಮೊಟ್ಟೆ ಇಡುತ್ತವೆ

– **ಶಶಿಧರಸ್ವಾಮಿ ಆರ್.** ಹಿರೇಮಠ

# ಸ್ವಾರ್ಥ: ತಡವಾಗಿ ತೆರೆದ ಕಣ್ಣು

ಸೋಫಾ ಮೇಲೆ ಕುಸಿದು ಕುಳಿತ ಸುಧೀರ್‌ಗೆ, ಸಮಯದ ಪರಿವೆ ಇರಲಿಲ್ಲ. ಬಚ್ಚಲು ಮನೆಗೆ ಹೋಗಬೇಕು ಎನಿಸಿದಾಗ ಎದ್ದ. ಹೊಟ್ಟೆ ಚುರುಗುಟ್ಟಿದ್ದು ಗಮನಕ್ಕೆ ಬಂತು. ಇಡೀ ಮನೆ ಕತ್ತಲಾಗಿದ್ದು, ತಾನು ಕನಿಷ್ಟ ಮೂರು ಗಂಟೆಗಳ ಕಾಲ ಮಂಕು ಬಡಿದವನಂತೆ ಕುಳಿತಿದ್ದೆ ಎಂದು ವಿಷಾದವಾಯಿತು. ನಾನು ಯಾರನ್ನೂ ಹಚ್ಚಿಕೊಳ್ಳುವುದಿಲ್ಲ, ಭಾವನೆಗಳು, ಹೃದಯದ ನೋವು , ಅಕ್ಕರೆ, ಸ್ನೇಹ. ಈ ರೀತಿಯ ಮಾತುಗಳು ನನ್ನ ಬದುಕಿನಲ್ಲಿ ನಿಷೇಧ ಎಂದು ರಾಜಾರೋಷವಾಗಿ ಹೇಳುತ್ತಿದ್ದೆ ನಾನು. ತನಗಾಗಿ ಎಲ್ಲವನ್ನೂ ತ್ಯಾಗ ಮಾಡಿದ ತಾಯಿಯನ್ನೂ ಸಹ ಪರಿಗಣಿಸದೆ, ಸ್ವಾರ್ಥಿಯಾಗಿ ಬದುಕಿದ್ದ ತಾನು ಇಂದು ನೆರೆಮನೆಯವನಾಗಿದ್ದ ಒಬ್ಬಾತನ ಸಾವಿಗೆ ಇಷ್ಟು ಸಂಕಟ ಪಡುತ್ತಿದ್ದೇನೆ ಎಂದು ಅಚ್ಚರಿಯಾಯಿತು.

ಬೆಳಗ್ಗಿನಿಂದ ಹೊಟ್ಟೆಗೆ ಏನೂ ಹಾಕಿರಲಿಲ್ಲ. ತೂರಾಡುತ್ತಾ ಅಡುಗೆ ಮನೆಗೆ ಹೋಗಿ ನೀರು ಬಗ್ಗಿಸುವಷ್ಟರಲ್ಲಿ ವಾಂತಿ ಬಂದಂತಾಗಿ ಮತ್ತೆ ಬಾತ್ರೂಮಿಗೆ ಓಡಿದ. ಅಲ್ಲಿ ಬರೀ ನೀರು ಕಕ್ಕಿ ಆಚೆ ಬರುವಷ್ಟರಲ್ಲಿ ಸುಸ್ತಾಗಿತ್ತು. ಮತ್ತೆ ಕುಸಿದು ಕುಳಿತವನಿಗೆ ಹಾಗೆಯೆ ಮಂಪರು ಆವರಿಸುತ್ತಿದ್ದಾಗ ಡೋರ್ ಬೆಲ್ ಸದ್ದು ಕೇಳಿ ಬೆಚ್ಚಿಬಿದ್ದ. ಹೊರಗಡೆ ಮುಖೀರನ ತಾಯಿ ಸಬೀಹ ನಿಂತಿದ್ದಳು.

ಅವಳ ಕಣ್ಣಿನಲ್ಲಿ ಮಡುಗಟ್ಟಿದ್ದ ದು:ಖ ನೋಡಿ ಅವನಿಗೂ ಅಳುವಂತೆ ಆಯಿತು. ಬಟ್ಟೆಯಲ್ಲಿ ಸುತ್ತಿದ್ದ ಊಟದ ಡಬ್ಬಿ ಅವನ ಕೈಲಿತ್ತಳು. ಬಿಸಿಯಾದ ಖಿಚಡಿ ಇದೆ. ಮೊದಲು ಹೊಟ್ಟೆಗೆ ಹಾಕಿಕೊ. ಕೆಲವು ಗಂಟೆಗಳ ಹಿಂದಷ್ಟೇ ಮಗನನ್ನು ಮಣ್ಣು ಮಾಡಿದರೂ, ಆ ನೋವನ್ನು ನುಂಗಿ ತನಗಾಗಿ ಊಟ ತಂದ ಈ ಮಮತಾಮಯಿಯನ್ನು ನೋಡಿ ಕಣ್ಣು ಮಂಜಾಯಿತು. ಸ್ಪೂನ್ ಹಾಕಿ ನಿಧಾನವಾಗಿ ತಿನ್ನಲಾರಂಭಿಸಿದ. ಇಲ್ಲಿಯವರೆಗೂ ನಡೆದ ಘಟನೆಗಳು ಚಲನ ಚಿತ್ರದಲ್ಲಿ ಪರದೆಯ ಮೇಲೆ ಮೂಡುತ್ತಿರುವ ದೃಶ್ಯಗಳಂತೆ ಮನಸ್ಸಿ ನಲ್ಲಿ ಬರತೊಡಗಿತು.

ಆ ರೋಡಿನಲ್ಲಿ ಇದ್ದವರೆಲ್ಲರೂ ಮಧ್ಯಮ ವರ್ಗದ ಜನರು. ಜನಾರ್ದನ ಎಂಬಾತ ತನ್ನ ಇಬ್ಬರು ಪತ್ನಿಯರಿಗೂ ಅಕ್ಕಪಕ್ಕದಲ್ಲಿ ಮನೆ ಕಟ್ಟಿಕೊಟ್ಟು, ತಾನು ಎರಡೂ ಕಡೆ ಓಡಾಡಿಕೊಂಡು ಇರಬಹುದು ಎಂದು ತಿರುಕನ ಕನಸು ಕಂಡು, ಜೋಡಿ ಮನೆ ಕಟ್ಟಿಸಿದ. ಆದರೆ ಅವನ ಭಾರ್ಯೆಯರು ಅಲ್ಲಿಗೆ ಬರಲು ಒಪ್ಪದ ಕಾರಣ, ಆ ಮನೆಗಳನ್ನು ಬಾಡಿಗೆಗೆ ಕೊಡಬೇಕಾಯಿತು.

ಒಂದು ಮನೆಗೆ ಬಂದಿದ್ದು, ಆಗಷ್ಟೇ ವಿಧವೆಯ ಪಟ್ಟ ಹೊತ್ತ ರೇವತಿ ಹಾಗೂ ಅವಳ ಮಗ ಸುಧೀರ್. ಪ್ರೇಮ ವಿವಾಹ ಮಾಡಿಕೊಂಡ ತಪ್ಪಿಗೆ ಬಂಧುಬಾಂಧವರಿಂದ ದೂರ ಉಳಿಯಬೇಕಾದ ಪರಿಸ್ಥಿತಿ ಅವಳಿಗೆ. ಇನ್ನೊಂದು ಮನೆಗೆ ಬಂದಿದ್ದು ಅವಳಷ್ಟೆ ವಯಸ್ಸಾದ ಸಬೀಹ ಹಾಗೂ ಅವಳ ಮಗ ಮುಖೀರ್. ಅವನಿಗೂ ಸುಧೀರನಷ್ಟೇ ವಯಸ್ಸು. ಜತೆಗೆ ಸಬೀಹಾಳ ಅತ್ತೆ ಹುಸ್ನಾ ಬೀ.

ಸಬೀಹಳ ಗಂಡ, ಹೆಂಡತಿ ಹಾಗೂ ತಾಯಿ ಇಬ್ಬರನ್ನೂ ತೊರೆದು ಕೆಲವು ದಿನಗಳ ಹಿಂದೆ ಒಬ್ಬಳು ಸಾಲದೆಂದು, ತಾನು ಮೋಹಿಸಿದ ಅಕ್ಕ ತಂಗಿ ಇಬ್ಬರನ್ನೂ ವಿವಾಹವಾಗಿದ್ದ. ಒಂದೆರಡು ರಸ್ತೆ ದಾಟಿದರೆ ಸಿಗುವ ಬಂಗಲೆಯಲ್ಲಿ ಅವರಿಬ್ಬರೂ ಅವನನ್ನು ತಮ್ಮ ಬಂದಿಯನ್ನಾಗಿ ಮಾಡಿಕೊಂಡಿದ್ದರು. ಜನಾರ್ದನನ ಸ್ನೇಹಿತನಾದ ಅವನಿಗೆ ಕಡಿಮೆ ಬಾಡಿಗೆಗೆ ಮನೆ ಸಿಕ್ಕಿತ್ತು.

ಹುಸ್ನಾ ಬೀ ಸೊಸೆಯ ಮೇಲೆ ವಿಶೇಷ ಪ್ರೀತಿ ಹೊಂದಿರದೇ ಇದ್ದರೂ, ಮೊಮ್ಮಗನ ಮೇಲೆ ಪ್ರಾಣ ಇಟ್ಟಿದ್ದಳು. ತನಗೆ ಪರಿಚಯ ಇರುವ ಕೆಲವರನ್ನು ಕಾಡಿ ಬೇಡಿ ಸೊಸೆಗೆ ಕೆಲಸ ಕೊಡಿಸಿದ್ದಳು. ಚಂದದ ಚೆಲುವೆ ಸಬೀಹಾಳಿಗೆ ಅವಳ ಮೇಲಧಿಕಾರಿ ಮನಸೋತ. ಆದರೆ ಅವನು ವಿವಾಹಿತ, ಎರಡು ಮಕ್ಕಳ ತಂದೆ. ಸಾಕಷ್ಟು ಸ್ಥಿತಿವಂತನಾಗಿದ್ದ ಅವನು ಸಬೀಹಾಳಿಗೆ ಪತ್ನಿಯ ಸ್ಥಾನ ಕೊಡದೆ ಇದ್ದರೂ, ಅವಳ ಸಂಸಾರಕ್ಕೆ ಸಾಕಷ್ಟು ಸಹಾಯ ಮಾಡಿದ. ಸೊಸೆಯ ಬಗ್ಗೆ ಒಡಕು ಮಾತುಗಳು ಹುಸ್ನಾಳಿಗೂ ತಲುಪಿದರೂ, ಅವಳು ಏನೂ ಮಾಡದೆ ಸುಮ್ಮ ನಿದ್ದುಬಿಟ್ಟಳು. ಒಳ್ಳೆಯ ದರ್ಜೆಯ ಊಟ, ಬಟ್ಟೆ, ವಿದ್ಯಾಭ್ಯಾಸ ಸಿಕ್ಕಿದ ಮೇಲೆ, ದಿನೇ ದಿನೇ ಮುದ್ದಾಗಿ ಬೆಳೆಯುತ್ತಿದ್ದ ಮುಖೀರನತ್ತ ಗಮನವಿತ್ತಳು.

ರೇವತಿಯ ಗಂಡ ಕೊಂಚ ದುಡ್ಡು ಕಾಸು ಉಳಿಸಿದ್ದ. ಜತೆಗೆ ಅವಳೂ ಸಹ ಶಾಲೆಯಲ್ಲಿ ಟೀಚರ್ ಕೆಲಸ ಮಾಡಿ ಸಾಕಷ್ಟು ಸಂಪಾದಿಸುತ್ತಿದ್ದಳು. ಯಾವ ಆಮಿಷಕ್ಕೂ ಒಳಗಾಗದೆ, ಸನ್ಯಾಸಿನಿಯಂತೆ ಜೀವನ ಸಾಗಿಸುತ್ತಿದ್ದ ಅವಳಿಗೂ, ಗಂಡ ಇದ್ದರೂ, ಪ್ರಿಯಕರನ ಜತೆ ಸುಖವಾಗಿ ಜೀವಿಸುತ್ತಿದ್ದ ಸಬೀಹಾಳಿಗೂ ಗಾಢ ಸ್ನೇಹ. ಮಕ್ಕಳೂ ಸಹ ಯಾವುದೇ ಭೇದವಿಲ್ಲದೆ ಎರಡೂ ಮನೆಯಲ್ಲಿ ಓಡಾಡಿಕೊಂಡಿದ್ದರು. ಹುಸ್ನಾ ಬೀ ಕೈ ತುತ್ತು ಉಂಡು, ಅಲ್ಲೇ ಆಟವಾಡಿ ಸುಸ್ತಾಗಿ ಮಲಗಿಬಿಡುತ್ತಿದ್ದ ಸುಧೀರ್. ಸ್ಕೂಲು, ಟ್ಯೂಶನ್, ಮನೆ ಕೆಲಸ ಮಾಡಿ ಬಸವಳಿಯುತ್ತಿದ್ದ ರೇವತಿಗೆ ಹುಸ್ನಾ ಬೀ ತಾಯಿಯಂತೆ ಇದ್ದಳು.

ಮಕ್ಕಳು ಬೆಳೆಯುತ್ತ ಶಾಲೆ ಮುಗಿಸಿ ಪದವಿಪೂರ್ವ ಕಾಲೇಜಿಗೆ ಸೇರಿದಾಗ ಮಹತ್ವದ ಬದಲಾವಣೆಗಳು ನಡೆದವು. ತಾಯಿಯ ಬಗ್ಗೆ ಮುಖೀರನಿಗೆ ಎಲ್ಲವೂ ಗೊತ್ತಾಗಿತ್ತು. ಅವಳ ಮೇಲಧಿಕಾರಿ ರಾಜಕೀಯ ಪುಢಾರಿ ಸಹ. ಈಗ ಮೊದಲಿಗಿಂತ ಶ್ರೀಮಂತನಾಗಿದ್ದ. ಅವನ ಧರ್ಮ ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳು ಅತ್ತು, ಜಗಳವಾಡಿ, ಧಮಕಿ ಹಾಕಿ, ಕೊನೆಗೆ ಸೋತು ಸಬೀಹಾಳನ್ನು ಒಪ್ಪಿಕೊಂಡಿದ್ದರು. ಆದರೆ ಕಾಲೇಜಿನಲ್ಲಿ ಮುಖೀರನನ್ನು ಅವಾಚ್ಯ ಪದಗಳಿಂದ ಕರೆಯುತ್ತಿದ್ದವರ ಸಂಖ್ಯೆ ಸಾಕಷ್ಟು ಇತ್ತು.

ತನ್ನ ವಯಸ್ಸಿ ಗೆ ಮೀರಿದ ತಿಳುವಳಿಕೆ ಇದ್ದ ಮುಖೀರ್ ವಿದ್ಯಾಭ್ಯಾಸಕ್ಕೆ ಪೂರ್ಣ ಗಮನ ಕೊಟ್ಟಿದ್ದ. ತನ್ನ ವಯಸ್ಸಿನವರಿಗೆ ಇರುವಂತಹ ದುಶ್ಚಟಗಳಾದ ಸಿಗರೇಟು, ಮದ್ಯಪಾನ , ಮಾದಕವಸ್ತುಗಳು ಒಮ್ಮೆಯೂ ಮುಟ್ಟಿದವನಲ್ಲ. ಒಳ್ಳೆಯ ಅಂಕಗಳು ಪಡೆದು, ತಾಂತ್ರಿಕ ವಿಜ್ಞಾನ ಕಾಲೇಜಿನಲ್ಲಿ ಸೀಟು ಸಿಕ್ಕಿದಾಗ ತಾಯಿಯ ಪಾದ ಹಿಡಿದು ಅತ್ತೇ ಬಿಟ್ಟಿದ್ದ. ತಾಯಿಯ ಸಹಾಯವಿಲ್ಲದೆ ಇದ್ದಿದ್ದರೆ, ಅಲ್ಲಿ ಸೆಕ್ಯೂರಿಟಿ ಕೆಲಸಕ್ಕೆ ಸೇರಬೇಕಿತ್ತು ತಾನು, ಅದನ್ನು ತಪ್ಪಿಸಿ ಓದಲು ಅವಕಾಶ ಮಾಡಿಕೊಟ್ಟ ತಾಯಿ ಹಾಗೂ ಅವನ ಪ್ರಿಯಕರನಿಗೆ ಅವನು ಋಣಿ. ತಾಯಿಯ ನಡತೆ ಬಗ್ಗೆ ಚಕಾರವೆತ್ತದೆ, ತನ್ನ ಬದುಕನ್ನು ರೂಪಿಸಿಕೊಳ್ಳುತ್ತಿದ್ದ ಅವನನ್ನು ಕಂಡರೆ ರೇವತಿಗೆ ಪ್ರಾಣ.

ಅವಳ ಮಗ ಸುಧೀರ್, ಅದೇ ಸಮಯಕ್ಕೆ ಕೆಟ್ಟ ಸಹವಾಸಕ್ಕೆ ಬಿದ್ದು ಫೇಲಾದ. ಡಿಪ್ಲೊಮಾ ಸೇರುವೆ ಎಂದು ನುಡಿದಾಗ ಉಕ್ಕಿ ಬಂದ ನಿರಾಸೆ ನುಂಗಿ ಹಣ ಕೊಟ್ಟಳು. ಹೇಗೋ ಪಾಸಾಗಿ ಸಣ್ಣ ಕೆಲಸ ಸಿಕ್ಕಿದಾಗ ಸಿಹಿ ಹಂಚಿದಳು ಕೂಡ. ಆದರೆ ಅವನ ಚಲನವಲನಗಳು ಗಮನಿಸಿದಾಗ ಅನುಮಾನ ಕಾಡಲಾರಂಭಿಸಿತು. ದುರ್ಜನರ ಜತೆ ಸೇರಿ ಮಗ ಎಲ್ಲ ತರಹದ ವ್ಯಸನಗಳಿಗೆ ದಾಸನಾಗಿದಾನೆ ಹಾಗೂ ಅವನ ಗ್ಯಾಂಗ್, ಶ್ರೀಮಂತ ಮನೆತನದ ಹೆಣ್ಣುಗಳಿಗೆ ಕಾಲ್ ಬಾಯ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದು ಗೊತ್ತಾದ ದಿನ ಭೂಮಿಗೆ ಇಳಿದುಹೋದಳು.



ಕೈ ತುಂಬ ಹಣ ಇದ್ದು, ಗಂಡನ ಸಾನಿಧ್ಯ ಸಿಗದೆ ಒಂಟಿಯಾಗಿ , ಪ್ರೀತಿಗಾಗಿ ಹಾತೊರೆಯುತ್ತಿರುವ ಹೆಣ್ಣುಗಳಿಗೆ ತನ್ನ ಮಗ ಕಾಸಿಗಾಗಿ ಸಮಯ ನೀಡುತ್ತಿದ್ದಾನೆ ಎಂದು ಸ್ಥಳೀಯ ವಾರ್ತಾಪತ್ರಿಕೆಗಳು ವರದಿ ಮಾಡಿದಾಗ ಸಂಪೂರ್ಣವಾಗಿ ಕುಸಿದಳು. ಅವಳಿ ಜವಳಿಗಳಂತೆ ಇದ್ದ ಸುಧೀ-ಮುಖೀರ್ ಸಂಬಂಧ ಕೂಡ ಸ್ಥಗಿತಗೊಂಡಿತ್ತು. ರೇವತಿಯ ಕಣ್ಣೀರಿನಲ್ಲಿ ಸಬೀಹ, ಹುಸ್ನಾ ಬೀ ಕೂಡ ಭಾಗಿಯಾದರು. ಆದರೆ ಸುಧೀರ್ ಎಲ್ಲರಿಂದ ದೂರ ಸರಿದು, ತನ್ನದೇ ಕೆಟ್ಟ ಪ್ರಪಂಚದಲ್ಲಿ ಮುಳುಗಿ ಹೋಗಿದ್ದ.

ಒಳ್ಳೆಯ ನೌಕರಿ ಸಿಕ್ಕ ಮುಖೀರ್, ತನ್ನ ಅಜ್ಜಿ ಹುಡುಕಿದ ಹೆಣ್ಣನ್ನು ಮದುವೆಯಾಗಿ, ಅವಳಿಗೆ ನಿಷ್ಠೆಯಿಂದ ಇದ್ದ. ತನ್ನ ತಂದೆ ಮಾಡಿದ ಯಾವ ತಪ್ಪನ್ನೂ ತಾನು ಮಾಡಬಾರದೆಂದು ನಿರ್ಧರಿಸಿದ್ದ ಅವನು, ತನ್ನ ಸಂಪೂರ್ಣ ಗಮನವನ್ನು ವೃತ್ತಿಗೆ ಹಾಗೂ ಸಂಸಾರಕ್ಕೆ ನೀಡಿದ್ದ. ಬಾಡಿಗೆಗೆ ಎಂದು ಬಂದ ಅದೇ ಮನೆಯನ್ನು ಖರೀದಿಸಿ ಸಬೀಹ ಮತ್ತು ರೇವತಿ ಮತ್ತಷ್ಟು ಹತ್ತಿರವಾಗಿದ್ದರು.

ಇದೇ ಸಮಯದಲ್ಲಿ ಸುಧೀರನ ಪ್ರೇಯಸಿಯಾಗಿದ್ದ ಒಬ್ಬಾಕೆಯ ಬೆಳೆದ ಮಕ್ಕಳು, ಇವರ ಮನೆಯ ಹತ್ತಿರ ಬಂದು ಗಲಾಟೆ ಮಾಡಿದರು. ರೌಡಿಯಂತೆ ಅವರೊಡನೆ ವರ್ತಿಸಿದ ಅವನನ್ನು ನೋಡಿ ರೇವತಿಯ ಮನಸ್ಸು ಜಿಗುಪ್ಸೆಗೊಂಡು, ಅವಳು ತಾನು ನಂಬಿದ್ದ ಸ್ವಾಮಿಗಳ ಆಶ್ರಮಕ್ಕೆ ನಡೆದಳು. ತಾಯಿ ಮನೆ ಬಿಟ್ಟು ಹೋಗಿದ್ದು ಸುಧೀರನಿಗೆ ಅನುಕೂಲವೇ ಆಯಿತು. ಅವನ ಮನೆಗೆ ಬರುತ್ತಿದ್ದ ಹೆಣ್ಣು, ಗಂಡುಗಳು, ಅಲ್ಲಿ ನಡೆಯುತ್ತಿದ್ದ ಪಾರ್ಟಿಗಳು ಹೇಸಿಗೆ ಅನಿಸಿದರೂ, ತನ್ನ ಪಾಡಿಗೆ ತಾನು ಇದ್ದುಬಿಟ್ಟಿದ್ದ ಮುಖೀರ್. ಮನೆಗಳು ಸಹ ಈಗ ಮಾರ್ಪಾಡಾಗಿ ದೊಡ್ಡದಾಗಿದ್ದವು. ನಡುವೆ ಸಣ್ಣ ಗೋಡೆಯೂ ಇತ್ತು. ತನ್ನ ಕಣ್ಣೆದುರು ಬೆಳೆದ ಈ ಹುಡುಗ ಹೀಗೆ ಹಾಳಾಗುತ್ತಿರುವುದನ್ನು ನೋಡಿ ಹುಸ್ನಾ ಬೀ ಸಂಕಟ ಪಟ್ಟಳು.

– **ಸಹನಾ** ಪ್ರಸಾದ್



# ಐತಿಹಾಸಿಕ ಎಲಿಫೆಂಟಾ ಗುಹೆಗಳು

ಎಲಿಫೆಂಟಾ ಗುಹೆಗಳು ಮಹಾರಾಷ್ಟ್ರದ ಮುಂಬೈ ಸಮೀಪದ ಘಾರಾಪುರಿ ದ್ವೀಪದಲ್ಲಿರುವ ಪ್ರಸಿದ್ಧ ಐತಿಹಾಸಿಕ ಹಾಗೂ ಪಾರಂಪರಿಕ ಪ್ರವಾಸಿ ತಾಣ. ಇಲ್ಲಿ ಕಲ್ಲಿನಲ್ಲಿ ಕೆತ್ತಲಾದ ಶಿವನ ವಿವಿಧ ರೂಪಗಳ ಅದ್ಭುತ ಶಿಲ್ಪಗಳು ಪ್ರಮುಖ ಆಕರ್ಷಣೆ. 1987ರಲ್ಲಿ ಇದು ಯುನೇಸ್ಕೋ ವಿಶ್ವ ಪಾರಂಪರಿಕ ತಾಣವಾಗಿ ಗುರುತಿಸಲ್ಪಟ್ಟಿದೆ.

**ಪ್ರಮುಖ ಆಕರ್ಷಣೆಗಳು :**

1. **ತ್ರಿಮೂರ್ತಿ ಸದಾಶಿವ ಶಿಲ್ಪ :** ಗುಹೆ1ರಲ್ಲಿರುವ ಬೃಹತ್ ತ್ರಿಮೂರ್ತಿ ಶಿಲ್ಪವು ಶಿವನ ಮೂರು ರೂಪಗಳನ್ನು ಪ್ರತಿನಿಧಿಸುತ್ತದೆ. ಇದು ಎಲಿಫೆಂಟಾ ಗುಹೆಗಳ ಅತ್ಯಂತ ಪ್ರಸಿದ್ಧ ಶಿಲ್ಪವಾಗಿದೆ.
2. **ಶಿವನ ವಿವಿಧ ರೂಪಗಳ ಶಿಲ್ಪಗಳು :** ನಟರಾಜ, ಅರ್ಧನಾರೀಶ್ವರ, ಗಂಗಾಧರ, ಯೋಗೀಶ್ವರ, ಕಲ್ಯಾಣ ಸುಂದರಮೂರ್ತಿ ಮುಂತಾದ ಶಿವನ ವಿವಿಧ ರೂಪಗಳ ಶಿಲ್ಪಗಳನ್ನು ಇಲ್ಲಿ ಕಾಣಬಹುದು.
3. **ಕಲ್ಲಿನ ವಾಸ್ತುಶಿಲ್ಪ :** ಗುಹೆಗಳನ್ನು ಗಟ್ಟಿಯಾದ ಬಸಾಲ್ಟ್ ಕಲ್ಲನ್ನು ಕೊರೆದು ನಿರ್ಮಿಸಲಾಗಿದೆ. ಪ್ರಮುಖ ಗುಹೆ1ರ ಒಳಭಾಗದಲ್ಲಿ ಕಂಬಗಳು, ಗರ್ಭಗುಡಿ ಮತ್ತು ವಿಶಾಲವಾದ ಶಿಲ್ಪಕಲಾ ವಿನ್ಯಾಸವಿದೆ.

**ಪ್ರವಾಸದ ಅನುಭವ :** ಮುಂಬೈನ ಗೇಟ್‌ವೇ ಆಫ್ ಇಂಡಿಯಾದಿಂದ ದೋಣಿಯಲ್ಲಿ ಎಲಿಫೆಂಟಾ ದ್ವೀಪಕ್ಕೆ ತೆರಳಬಹುದು. ಸಮುದ್ರಯಾನವು ಸುಮಾರು ಒಂದು ಗಂಟೆ ತೆಗೆದುಕೊಳ್ಳುತ್ತದೆ. ದ್ವೀಪ ತಲುಪಿದ ನಂತರ ಮೆಟ್ಟಿಲುಗಳ ಮೂಲಕ ಗುಹೆಗಳತ್ತ ಸಾಗಬಹುದು ; ಮೆಟ್ಟಿಲುಗಳ ಭಾಗದಲ್ಲಿ ಆಟಿಕೆ ರೈಲು ಸೌಲಭ್ಯವೂ ಇದೆ ಎಂದು ಮಹಾರಾಷ್ಟ್ರ ಪ್ರವಾಸೋದ್ಯಮ ಇಲಾಖೆ ತಿಳಿಸುತ್ತದೆ.

**ಐತಿಹಾಸಿಕ ಮಹತ್ವ :** ಈ ಗುಹೆಗಳ ನಿರ್ಮಾಣವನ್ನು ಮುಖ್ಯವಾಗಿ ಕ್ರಿ.ಶ. 56ನೇ ಶತಮಾನಕ್ಕೆ ಸೇರಿಸಲಾಗಿದೆ. ದ್ವೀಪದಲ್ಲಿ ಕ್ರಿ.ಪೂ. 2ನೇ ಶತಮಾನದಿಂದಲೂ ಮಾನವ ವಾಸದ ಪುರಾತತ್ವ ಸಾಕ್ಷ್ಯಗಳಿವೆ. ಎಲಿಫೆಂಟಾ ಗುಹೆಗಳು ಭಾರತೀಯ ಶಿಲ್ಪಕಲೆ ಮತ್ತು ಶಿಲಾ ವಾಸ್ತುಶಿಲ್ಪದ ಅತ್ಯುತ್ತಮ ಉದಾಹರಣೆಗಳಲ್ಲಿ ಒಂದಾಗಿದೆ.

**ಪ್ರವಾಸಿಗರಿಗೆ ಉಪಯುಕ್ತ ಮಾಹಿತಿ :**

★ ಮುಂಬೈನಿಂದ ದೋಣಿ ಮೂಲಕ ತೆರಳುವುದು ಮುಖ್ಯ ಮಾರ್ಗ.

★ ಬೆಳಿಗ್ಗೆ ತೆರಳಿದರೆ ಜನಸಂದಣಿ ಕಡಿಮೆ ಇರುವ ಸಮಯದಲ್ಲಿ ತಾಣವನ್ನು ವೀಕ್ಷಿಸಲು ಅನುಕೂಲ.

★ ಆರಾಮದಾಯಕ ಪಾದರಕ್ಷೆ ಧರಿಸುವುದು ಸೂಕ್ತ.

★ ನೀರು, ಟೋಪಿ ಮುಂತಾದವುಗಳನ್ನು ತೆಗೆದುಕೊಂಡು ಹೋಗುವುದು ಅನುಕೂಲಕರ.

★ ಸೋಮವಾರದಂದು ಗುಹೆಗಳು ಮುಚ್ಚಿರುತ್ತವೆ ಎಂದು ಮಹಾರಾಷ್ಟ್ರ ಪ್ರವಾಸೋದ್ಯಮ ಇಲಾಖೆಯ ಮಾಹಿತಿ.

★ ಎಲಿಫೆಂಟಾ ಗುಹೆಗಳು = ಸಮುದ್ರಯಾನ + ಪ್ರಾಚೀನ ಶಿಲಾ ವಾಸ್ತುಶಿಲ್ಪ + ಶಿವನ ಅದ್ಭುತ ಶಿಲ್ಪಗಳು + ಯುನೇಸ್ಕೋ ವಿಶ್ವ ಪಾರಂಪರಿಕ ತಾಣ.

★ ಇತಿಹಾಸ, ಕಲೆ, ವಾಸ್ತುಶಿಲ್ಪ ಮತ್ತು ಪ್ರಕೃತಿಯನ್ನು ಒಂದೇ ಪ್ರವಾಸದಲ್ಲಿ ಅನುಭವಿಸಲು ಇದು ಅತ್ಯುತ್ತಮ ಸ್ಥಳ.

– **ರಮೇಶ ನಾಯ್ಕ,** ಉಪ್ಪುಂದ, ಬೈಂದೂರು



# ನಿದ್ರಾ ಹೀನತೆಗೊಂದು ಉಪಾಯ



ಒಳ್ಳೇ ನಿದ್ರೆಯಿಲ್ಲದಿದ್ದರೆ, ಬುದ್ಧಿಯೇ ಓಡುವುದಿಲ್ಲ ಎಂಬುದು ನಮ್ಮೆಲ್ಲರ ಅನುಭವ. ನಿದ್ರೆಗೆಟ್ಟರೆ ಬುದ್ಧಿಗೆಟ್ಟಿತು ಎಂಬ ಗಾದೆ ಮಾತೂ ಇದೆ. ರಾತ್ರಿಯ ಸೊಂಪಾದ ನಿದ್ರೆಯು ಆರೋಗ್ಯದ ಮೊದಲನೇ ಲಕ್ಷಣವೆನ್ನಬಹುದು. ಅಮೇರಿಕಾದಲ್ಲಿ ಮೂರನೇ ಒಂದು ಭಾಗದಷ್ಟು ವಯಸ್ಕರಿಗೆ ದಿನವೂ ಅಗತ್ಯವಿರುವಷ್ಟು ನಿದ್ರೆಯಾಗುತ್ತಿಲ್ಲ. ಇತ್ತೀಚೆಗೆ ನಮ್ಮ ದೇಶದಲ್ಲಿಯೂ ಈ ಪ್ರವೃತ್ತಿ ಹೆಚ್ಚಾಗುತ್ತಿದೆ. ನಗರ ಪ್ರದೇಶದಲ್ಲಿ ನಿದ್ರಾ ಸಮಸ್ಯೆ ಹೆಚ್ಚು. ಕಾರಣಗಳು ಹಲವಾರು. ದಿನನಿತ್ಯದ ಜೀವನದಲ್ಲಿ ಒತ್ತಡ, ಆತಂಕ, ಸಂಸಾರದ, ವ್ಯವಹಾರದ ಚಿಂತೆಗಳು, ಆಗಾಗ್ಗೆ ಕಾಫಿ ಟೀ ಸೇವನೆ, ಸಾಮಾಜಿಕ ಮಾಧ್ಯಮದ ಹಾವಳಿಗಳು ಇತ್ಯಾದಿ. ನಿದ್ರೆ ಬಾರದಿದ್ದಾಗ ಮರುದಿನ ಅಸಿಡಿಟ್, ಕೆಲಸದಲ್ಲಿ / ಮನೆಯಲ್ಲಿ ಸಿಡಿಮಿಡಿಗೊಳ್ಳುವುದು, ಪುನಃ ನಿದ್ರೆ ಬಾರದೆಂದು ಚಿಂತಿಸುವುದು ಹೀಗೆ ನಡೆಯುತ್ತಿರುತ್ತದೆ. ಇದೊಂದು ವಿಷ ಚಕ್ರ.

**ನಿದ್ರಾಹೀನತೆಯ ಸಮಸ್ಯೆಗೆ ನಮ್ಮ ಮಟ್ಟದಲ್ಲಿ ಯಾವ್ಯಾವ ಉಪಾಯಗಳಿವೆಯೆಂದು ನೋಡೋಣ.**

1. ಮಲಗುವ ಸಮಯದಲ್ಲಿ, ಶಿರದಿಂದ ಪಾದದವರೆಗೆ ಅಂಗಾಂಗಗಳನ್ನು ಸಡಿಲಗೊಳಿಸುತ್ತಾ, ಮನಸ್ಸನ್ನು ಹಗುರಗೊಳಿಸುತ್ತಾ ಯಾವುದೇ ಕ್ಷಣದಲ್ಲೂ ನಿದ್ರೆಯನ್ನು ಸ್ವಾಗತಿಸುವುದು.

2. ಮನಸ್ಸನ್ನು ಹಗುರಗೊಳಿಸಲು, ಧ್ಯಾನ ಅಥವಾ ಮೈಂಡಫುಲ್ ನೆಸ್ (ಅರಿವು ಅಥವಾ ಪ್ರತಿಕ್ಷಣವೂ ಪ್ರಜ್ಞಾಪೂರ್ವಕವಾಗಿರುವುದು) ಪ್ರಯೋಗ ಯೋಗ್ಯ. ಧ್ಯಾನವೆಂದರೆ ಮಂತ್ರವನ್ನು ಅಥವಾ ಯಾವುದೋ ಒಂದು ಪದವನ್ನು ಏಕಾಗ್ರತೆಯಿಂದ ಪಠಿಸುವುದು. ಸಾಮಾನ್ಯವಾಗಿ ಈ ಪ್ರಕ್ರಿಯೆ ಒಂದು ಧರ್ಮಕ್ಕೆ ಸೀಮಿತವಾಗಿರುತ್ತದೆ.

ಅರಿವೆಂದರೆ (ಮೈಂಡ್ ಫುಲ್ ನೆಸ್) ಪ್ರತಿಕ್ಷಣದಲ್ಲಿಯೂ ಪ್ರಜ್ಞಾ ಪೂರ್ವಕವಾಗಿರುವುದು. ಉದಾಹರಣೆಗೆ ದೀರ್ಘ ಉಸಿರಾಟ, ಕೆಲಸ ಮಾಡುವುದು, ಊಟ ಮಾಡುವುದು, ನಡೆದಾಡುವಾಗ ಎಲ್ಲವನ್ನು ಪ್ರಜ್ಞಾಪೂರ್ವಕವಾಗಿ ಮಾಡುವುದು. ಕಳೆದ ಸಮಯ / ಘಟನೆಯಿಂದ ಚಿಂತೆ; ನಾಳೆಯ ದಿನವೆಂದರೆ ಆತಂಕ. ವರ್ತಮಾನವನ್ನು ಅನುಭವಿಸುವುದೇ ಜೀವನ. ಇದೇ ಮೈಂಡ್ ಫುಲ್ ನೆಸ್ ಪ್ರಕ್ರಿಯೆ. ಇದು ಯಾವುದೇ ಧರ್ಮಕ್ಕೆ ಸೀಮಿತವಾಗಿಲ್ಲ.

ಧ್ಯಾನ ಅಥವಾ ಮೈಂಡ್ ಫುಲ್ ನೆಸ್ ಹೇಗೆ ಪ್ರಯೋಜನವಾಗುತ್ತದೆಯೆಂದು ವಿಚಾರ ಮಾಡೋಣ. ಮೈಂಡ್ ಫುಲ್‌ನೆಸ್‌ನಲ್ಲಿ ಉಸಿರಾಟದ ಬಗ್ಗೆ ಗಮನ ಕೊಡುವುದು, ನಮ್ಮ ದೇಹ ಮತ್ತು ಮನಸ್ಸನ್ನು ಗಮನಿಸುವ ಕ್ರಿಯೆ. ಧ್ಯಾನದಲ್ಲಿ ಮಂತ್ರಪಠಣೆಯ ಬಗ್ಗೆ ಗಮನ ಕೊಡುವುದು.

ದಿನದ ಒಂದು ನಿರ್ದಿಷ್ಟ ಸಮಯದಲ್ಲಿ ಈ ಪ್ರಕ್ರಿಯೆ ಅನುಸರಿಸುವುದರಿಂದ ನಮ್ಮ ಮನಸ್ಸಿನ ಮತ್ತು ದೇಹದ ವಿಶ್ರಾಂತಿಗೆ ಅನುಕೂಲವಾಗುತ್ತದೆ. ಉಸಿರಾಟದ ಗತಿ ನಿಧಾನವಾಗುತ್ತದೆ ಹೃದಯ ಬಡಿತ ನಿಧಾನವಾಗುತ್ತದೆ. ರಕ್ತ ಪರಿಚಲನೆ ಸುಧಾರಿಸುತ್ತದೆ, ಒತ್ತಡದ ಹಾರ್ಮೋನ್‌ಗಳು ಕಡಿಮೆಯಾಗುತ್ತವೆ. ಇದರಿಂದ ನಿರಂತರವಾಗಿ ಯೋಚಿಸುವ ಮನಸ್ಸು ಶಾಂತಗೊಳ್ಳುತ್ತದೆ. ದೇಹವು ಶಾಂತವಾಗುತ್ತದೆ, ನಿದ್ರೆಗೆ ಜಾರಲು ಹೆಚ್ಚು ಸಮರ್ಥರಾಗುತ್ತೇವೆ. ನಿದ್ರೆಗೆ ಪೂರಕವಾಗುವ ಮೆಲಟೋನಿನ್ ಹಾರ್ಮೋನ್ ಪ್ರಮಾಣವು ಹೆಚ್ಚುತ್ತದೆ. ಈ ಪ್ರಕ್ರಿಯೆಯು ಆರೋಗ್ಯಕರ ಜೀವನಕ್ಕೆ ಪೂರಕವಾಗಿದೆಯೆಂದು ಸಂಶೋಧನೆಗಳು ದೃಢಪಡಿಸಿವೆ.

ಇದಲ್ಲದೆ, ಮನಸ್ಸಿನ ಏಕಾಗ್ರತೆ ಹೆಚ್ಚುತ್ತದೆ. ಏಕಾಗ್ರತೆಯ ಧ್ಯಾನ ಅಥವಾ ಮೈಂಡ್‌ಫುಲ್‌ನೆಸ್ ಯಾವುದೇ ರೂಪವನ್ನು ಅಭ್ಯಾಸ ಮಾಡುತ್ತಿರಲಿ, ಓಡುತ್ತಿರುವ ಆಲೋಚನೆಗಳು ಕಡಿಮೆಯಾಗಲು ಪ್ರಾರಂಭಿಸುತ್ತವೆ. ನಮ್ಮ ವಿಚಾರದಲ್ಲಿ ಗೊಂದಲ ಕಡಿಮೆಯಾಗಿ, ಸ್ಪಷ್ಟತೆ ಮೂಡುತ್ತದೆ. ಇದರಿಂದಾಗಿ ನಾವು ಚಿಂತೆಯಲ್ಲಿ ಮುಳುಗುವ ಸಾಧ್ಯತೆ ಕಡಿಮೆಯಾಗುತ್ತದೆ.

ದೈನಂದಿನ ಅಭ್ಯಾಸಗಳ ಬಗ್ಗೆ ಜಾಗರೂಕತೆಯನ್ನು ಹೆಚ್ಚಿಸುವುದು ಮತ್ತು ದಿನವಿಡೀ ನಾವು ಅರಿವನ್ನು ಅಭ್ಯಾಸ ಮಾಡುತ್ತಿದ್ದಂತೆ, ನಮ್ಮ ಸಾಮಾನ್ಯ ಯೋಗಕ್ಷೇಮದ ಸ್ಥಿತಿಯ ಬಗ್ಗೆ ನಾವು ಹೆಚ್ಚು ಜಾಗೃತರಾಗುವ ಸಾಧ್ಯತೆಯಿದೆ. ಕಾಲಕ್ರಮೇಣ, ಆರೋಗ್ಯವನ್ನು ಉತ್ತೇಜಿಸುವ ಅಭ್ಯಾಸಗಳಿಗೆ ಆದ್ಯತೆ ನೀಡಲು ಮತ್ತು ಹಾನಿಕಾರಕ ಮಾದರಿಗಳನ್ನು ಕೈ ಬಿಡಲು ಪ್ರಾರಂಭಿಸುತ್ತೇವೆ. ಉದಾಹರಣೆಗೆ, ನಿರಂತರ ಮೈಂಡ್‌ಫುಲ್‌ನೆಸ್ ಅಭ್ಯಾಸದ ಮೂಲಕ, ಮಲಗುವ ಮುನ್ನ ಸಿಹಿ ತಿನ್ನುವ ಸಾಧ್ಯತೆ ಕಡಿಮೆಯಾಗಬಹುದು. ಪರಿಣಾಮವಾಗಿ, ನಮ್ಮ ರಕ್ತದ ಸಕ್ಕರೆ ಮಟ್ಟವು ಸಮತೋಲನಕ್ಕೆ ಬರುತ್ತದೆ.




ನಿದ್ರೆಯ ಮಾದರಿಗಳನ್ನು ಜಾಗರೂಕತೆಯಿಂದ ಸುಧಾರಿಸಲು ಕೆಲವು ಸಲಹೆಗಳು: ಮಲಗುವ ಮುನ್ನ ಶರೀರವನ್ನು ಹಿಗ್ಗಿಸುವುದು, ಔಪಚಾರಿಕ ಯೋಗಾಸನಗಳಿಂದ ಮತ್ತು ಮೈಂಡ್ ಫುಲ್ ನೆಸ್ ನಲ್ಲಿ ತೊಡಗಿಸಿಕೊಳ್ಳುವುದರಿಂದ ನಮ್ಮ ಒತ್ತಡವನ್ನು ನಿವಾರಿಸಿಕೊಳ್ಳಬಹುದು.

ಕೆಲಸ ಅಥವಾ ಇತರ ಜವಾಬ್ದಾರಿಗಳು ನಿಮಗೆ ಪ್ರಮುಖ ಒತ್ತಡದ ಅಂಶವಾಗಿದ್ದರೆ, ಮರುದಿನಕ್ಕಾಗಿ ಮಾಡಬೇಕಾದ ಕೆಲಸಗಳ ಪಟ್ಟಿಯನ್ನು ಬರೆಯುವುದರಿಂದ, ನಿಮ್ಮ ಮನಸ್ಸಿನ ಒತ್ತಡ ಕಡಿಮೆ ಮಾಡಿಕೊಳ್ಳಬಹುದು. ವಿಶ್ರಾಂತಿ ಪಡೆಯಲು ಸೂಕ್ತ ಸಮಯ ಸನ್ನಿಹಿತವಾಗಿದೆಯೆಂದು ತಿಳಿಯಿರಿ. ನಾಳೆಯ ದಿನವನ್ನು ನಾಳೆಗೆ ಬಿಡಿ.

ನಮ್ಮ ನಿದ್ರೆಯ ಚಕ್ರವನ್ನು (ಸರ್ಕಾಡಿಯನ್ ರಿಥಮ್, ಸೂರ್ಯೋದಯ - ಅಸ್ತಂಗತ ಅನುಸರಿಸುವ ಸಮಯ) ಅಡ್ಡಿಪಡಿಸುವಲ್ಲಿ ಬೆಳಕು ದೊಡ್ಡ ಪಾತ್ರವನ್ನು ವಹಿಸುತ್ತದೆ, ಆದ್ದರಿಂದ ಸಂಜೆ ಮಂದ ದೀಪಗಳ ಬೆಳಕನ್ನು ಆಯ್ಕೆ ಮಾಡುವುದರಿಂದ ಅದನ್ನು ತಡೆಗಟ್ಟಬಹುದು.

ಎಲೆಕ್ಟ್ರಾನಿಕ್ಸ್ ಸಾಧನಗಳು ನಮ್ಮನ್ನು ವಿಶ್ರಾಂತಿಯಿಂದ ದೂರವಿರಿಸುವ ಪ್ರಮುಖ ವಿಷಯ. ಆದ್ದರಿಂದ ನಾವು ನಿದ್ರಿಸುವ 30 ನಿಮಿಷಗಳ ಮೊದಲು ಅವುಗಳನ್ನು ಆಫ್ ಮಾಡಲು ಸಾಧ್ಯವಾದರೆ ಒಳ್ಳೇದು. ಹಗುರವಾದ ಸಂಭಾಷಣೆಗಳು, ಓದುವುದು, ಸಂಗೀತ, ಬರೆಯುವುದು ಅಥವಾ ಶರೀರ ಹಿಗ್ಗಿಸುವಿಕೆಯಂತಹ ಕಡಿಮೆ ಪ್ರಚೋದನಕಾರಿ ಚಟುವಟಿಕೆಗಳನ್ನು ಆಯ್ಕೆ ಮಾಡಿ. ಕಾಫಿ, ಟೀ ಸೇವನೆಯನ್ನು ಮಿತಿಗೊಳಿಸಿ ಮತ್ತು ಸಂಜೆ ಸೇವಿಸದಿರಿ. ಸಂಜೆಯ ಊಟ ಇತಿಮಿತಿಯಲ್ಲಿರಲಿ ಹಾಗೂ ಮಲಗುವ ಮೂರು ಗಂಟೆ ಮೊದಲಿರಲಿ.

– **ಪ್ರಕಾಶ ಎನ್,** ಮಂಗಳೂರು.

# ಸಾಯುವನೆಂಬ ಎಂಬ ಮಾತು ಬರದಿರಲಿ ನಾಲಿಗೆಯಲ್ಲಿ

ಒಂದೊಳ್ಳೆ ಮಾತು

ಎಷ್ಟೋ ವರ್ಷಗಳಿಂದ ಒಬ್ಬ ವ್ಯಕ್ತಿ ಕಟ್ಟಿಗೆ ಮಾರಿ ಜೀವನ ನಡೆಸುತ್ತಿದ್ದ. ಪ್ರತಿದಿನ ಕಾಡಿಗೆ ಹೋಗಿ ಕಟ್ಟಿಗೆ ಒಡೆದು ತರುವುದು ಮಾರುಕಟ್ಟೆಯಲ್ಲಿ ಅದನ್ನು ಮಾರಾಟ ಮಾಡುವುದು. ಅದರಿಂದ ಬರುವ ಹಣದಿಂದಲೇ ಅವನ ಜೀವನ ನಿರ್ವಹಣೆ. ಜೀವಮಾನವಿಡೀ ಇದೇ ಕೆಲಸ ಮಾಡಿ ಮಾಡಿ ಅವನಿಗೆ ಜೀವನ ಬಹಳ ಬೇಸರವೆನಿಸತೊಡಗಿತು. ಸ್ವಲ್ಪ ವಯಸ್ಸೂ ಆಗುತ್ತಾ ಬಂದಿತು. ಕೆಲಸ ಮಾಡಲು ಸ್ವಲ್ಪ ಕಷ್ಟವೆನಿಸತೊಡಗಿತು. ಒಂದು ದಿನ ಕಟ್ಟಿಗೆ ತರಲು ಕಾಡಿಗೆ ಹೋದ. ಅಂದು ಯಾಕೋ ಅವನಿಗೆ ಕೆಲಸ ಮಾಡುವ ಉತ್ಸಾಹವೇ ಇರಲಿಲ್ಲ.

ಎಷ್ಟು ದಿನಗಳಿಂದ ಇದನ್ನೇ ಮಾಡುತ್ತಿದ್ದೇನೆ, ಒಂದು ದಿನ ಸತ್ತು ಹೇಗೂ ಮಣ್ಣಿನಲ್ಲಿ ಸೇರುವುದು ಇದ್ದೇ ಇದೆ, ಅದಕ್ಕಾಗಿ ಇಷ್ಟೆ ಯಾಕೆ ನಾನು ಕಷ್ಟಪಡಬೇಕು?

ಈ ಜೀವನ ಯಾಕೋ ಸಾಕಾಗಿ ಹೋಗಿದೆ, ಮುಂದೆ ಒಂದು ದಿನ ಬರುವ ಸಾವು ಇಂದೇ ಏಕೆ ಬರಬಾರದು? ಎಂದು ಬೇಸರದಿಂದ ನೊಂದುಕೊಂಡು, ಓ, ಸಾವೇ ನೀನು ಇಂದೇ ಬರಬಾರದೇ? ನಾನು ಈ ಜೀವನದಿಂದ ಬಹಳ ನೊಂದಿದ್ದೇನೆ. ನನಗೆ ಈ ಜೀವನ ಸಾಕಾಗಿ ಹೋಗಿದೆ. ಕೃಪೆ ಮಾಡಿ ನನಗೆ ಇದರಿಂದ ಇಂದೇ ಮುಕ್ತಿ ಕೊಡು ಎಂದ. ಇದನ್ನು ಕೇಳಿಸಿಕೊಂಡ ಮೃತ್ಯು ದೇವತೆ, ತಕ್ಷಣವೇ ಅವನೆದುರು ಬಂದು ನಿಂತು, ನಾನು ಮೃತ್ಯು ದೇವತೆ, ನೀನು ನನ್ನನ್ನು ಕರೆದೆಯೆಂದು ಬಂದೆ, ನನ್ನಿಂದ ನಿನಗೇನು ಆಗಬೇಕಿದೆ? ಎಂದ.

ಈ ವ್ಯಕ್ತಿಗೆ ಉಸಿರು ಕಟ್ಟಿದಂತಾಗಿ, ಭಯದಿಂದ ನಡುಗಲಾರಂಭಿಸಿದ. ಉಗುಳು ನುಂಗುತ್ತಾ, ನಿಧಾನವಾಗಿ, ಏನಿ ಪ್ರಭೂ, ಈ ಕಟ್ಟಿಗೆ ಹೊರೆಯನ್ನು ನನ್ನೊಬ್ಬನಿಂದಲೇ ತಲೆಯ ಮೇಲೆ ಇಟ್ಟುಕೊಳ್ಳಲಾಗಲಿಲ್ಲ, ಇಲ್ಲಿ ಯಾರೂ ಕಾಣಿಸಲಿಲ್ಲ. ಅದಕ್ಕಾಗಿ ನಿಮ್ಮನ್ನು ಕರೆದೆ, ಕೃಪೆ ಮಾಡಿ ನನ್ನ ತಲೆಯ ಮೇಲೆ ಈ ಕಟ್ಟಿಗೆಯ ಹೊರೆಯನ್ನು ಇಟ್ಟುಕೊಳ್ಳಲು ಸ್ವಲ್ಪ ಸಹಾಯ ಮಾಡಿ ಎಂದ. ಸುಮ್ಮನೆ, ಸಾಯುವ ಮಾತು ಆಗಾಗ್ಗ ನಮ್ಮ ಬಾಯಿಂದ ಬರುತ್ತಲೇ ಇರುತ್ತದೆ. ಆದರೆ ಯಾರಿಗೂ ಸಾಯುವ ಆಕಾಂಕ್ಷೆ ಇರುವುದಿಲ್ಲ. ಮನಸ್ಸಿನಲ್ಲಿ ಎಲ್ಲರಿಗೂ ಜೀವಿಸುವ ಆಕಾಂಕ್ಷೆಯೇ ಇರುವುದು. ಜೀವನದಲ್ಲಿ ನಾವು ಬಹಳವಾಗಿ ನೊಂದುಕೊಂಡಾಗ, ನಮ್ಮ ಆಸೆಗಳು ನೆರವೇರದಿದ್ದಾಗ ಬದುಕು ಸಾಕೆನಿಸಿ ಸಾಯುವ ಆಕಾಂಕ್ಷೆಗಳು ಬರು ವುದು ಸಹಜ. ಈ ರೀತಿ ವ್ಯರ್ಥ ಜೀವನ ನಡೆಸುವುದಕ್ಕಿಂತ, ಸಾವೇ ಎಷ್ಟೋ ಮೇಲು ಎನಿಸುವುದು ಸಹಜ. ಆದರೆ ನಿಜವಾಗಿಯೂ ಯಾರಿಗೂ ಸಾಯಬೇಕೆಂಬ ಆಸೆ ಇರುವುದಿಲ್ಲ, ಎಲ್ಲರೂ ಬದುಕಿರುವುದನ್ನೇ ಬಯಸುವುದು. ನಮ್ಮಲ್ಲಿ ಕೆಲವರು ಕಷ್ಟಗಳನ್ನು ತಡೆದುಕೊಳ್ಳಲಾಗದೆ ಸತ್ತು ಹೋಗಿಬಿಡಬೇಕು ಅನ್ನಿಸ್ತಿದೆ, ಅನ್ನುವ ಮಾತುಗಳನ್ನ ನಾವು ಕೇಳಿರುತ್ತೇವೆ. ಆಗ ಅವರಿಗೆ ಬೈದು ಸಮಾಧಾನವನ್ನು ಕೂಡ ಮಾಡಿರುತ್ತೇವೆ. ಆದರೆ ಕೆಲವರಿಗೆ ಈ ರೀತಿ ಮಾತನಾಡುವುದು, ಎಲ್ಲದರಲ್ಲೂ ನಕಾರಾತ್ಮಕ ವಿಷಯಗಳನ್ನು ಹುಡುಕುವುದು ಎಷ್ಟು ಅಭ್ಯಾಸವಾಗಿ ಬಿಟ್ಟಿರುತ್ತದೆ ಎಂದರೆ, ಅನಗತ್ಯವಾಗಿ ಮತ್ತೊಬ್ಬರ ಸಾಂತ್ವನ ಗಳಿಸಲು ಮತ್ತೆ ಮತ್ತೆ ಈ ರೀತಿ ಮಾತನಾಡುತ್ತಿರುತ್ತಾರೆ. ಅವರಿಗೆ ಸಮಾಧಾನ ಪಡಿಸಲು ಹೋದ ಅನೇಕರು ಖಿನ್ನತೆಗೆ ಜಾರುವ ಸಾಧ್ಯತೆಗಳು ಇರುತ್ತದೆ.



ಅಂತಹವರನ್ನು ಯೋಚನೆಯ ಬಾವಿಯಿಂದ ಹೊರಗೆ ತರುವುದಿರಲಿ ನಾವೇ ಅದರೊಳಗೆ ಬಿದ್ದು ಹೋಗುವ ಆದ್ದರಿಂದ ತಿದ್ದಿಕೊಳ್ಳಲು ಮನಸ್ಸು ಮಾಡದವರಿಗೆ, ಹೇಳಿದ ಬುದ್ಧಿವಾದವನ್ನು ಸ್ವೀಕರಿಸುವ ಮನಸ್ಥಿತಿ ಇಲ್ಲದವರಿಗೆ ಸದಾ ಬುದ್ಧಿವಾದ ಹೇಳಲು ಹೋಗಬೇಡಿ. ಕೆಲವರಿಗೆ ಪರಿಹಾರ ಬೇಕಿರುವುದಿಲ್ಲ ಅವರು ಸದಾ ಯಾವುದೋ ಒಂದು ಸಂಕಟ ತೋಡಿಕೊಳ್ಳುತ್ತಾ ಬದುಕುತ್ತಿರುತ್ತಾರೆ. ಜೀವನ್ಮುಖಿಯಾದ ನಾವು ಅವರನ್ನು ಸರಿಪಡಿಸಲು ಹೋಗಿ ನಮ್ಮ ಸಮಯ ಕೂಡ ವ್ಯರ್ಥವಾಗುತ್ತದೆ. ಎಂದಿಗೂ ನಮ್ಮ ಸಹಾಯ, ನಮ್ಮ ಒಳ್ಳೆಯ ತನ ನಮ್ಮ ಚೈತನ್ಯ ಅಪಾತ್ರದಾನವಾಗಬಾರದು. ಈ ಸೂಕ್ಷ್ಮವನ್ನು ತಿಳಿದು ಯಾರಿಗೆ ಸಹಾಯ ಮಾಡಬೇಕು, ಎಷ್ಟು ಬುದ್ಧಿ ಹೇಳಿ ಸರಿಪಡಿಸಬೇಕು ಎನ್ನುವ ಅರಿವು ನಮಗಿದ್ದರಾಯಿತು.

– **ರೂಪಾ** ಗುರುರಾಜ್

## ಟ್ರೋಫಿ ಸ್ವೀಕರಿಸದಿರುವುದು ಸಂಘಟಿತ ನಿರ್ಧಾರ

**ನವದೆಹಲಿ:** ದುಬೈನಲ್ಲಿ ನಡೆದ ಮಹಿಳೆಯರ ಏಷ್ಯಾ ಕಪ್ ಟಿ-20 ಫೈನಲ್‌ನಲ್ಲಿ ಗೆದ್ದ ಭಾರತ ತಂಡವು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷ ಮೊಹ್ಸಿನ್ ನಖ್ವಿ ಅವರಿಂದ ಟ್ರೋಫಿ ಸ್ವೀಕರಿಸಲಿಲ್ಲ. ಇದು ಬಿಸಿಸಿಐನ ಸಂಘಟಿತ ನಿರ್ಧಾರ ಎಂದು ಮಂಡಳಿ ಉಪಾಧ್ಯಕ್ಷ ರಾಜೀವ್ ಶುಕ್ಲಾ ಅವರು ಹೇಳಿದ್ದಾರೆ.

ಭಾನುವಾರ ರಾತ್ರಿ ಭಾರತದ ವನಿತೆಯರು ಫೈನಲ್‌ನಲ್ಲಿ ಶ್ರೀಲಂಕಾ ಎದುರು 72 ರನ್ ಜಯ ಸಾಧಿಸಿದರು. ಭಾರತವು ಎಂಟನೇ ಬಾರಿ ಏಷ್ಯಾ ಕಪ್ ಜಯಿಸಿತು. ಪಾಕಿಸ್ತಾನದ ನಖ್ವಿ ಅವರಿಂದ ಹರ್ಮನ್‌ಪ್ರೀತ್ ಕೌರ್ ಬಳಗವು ಟ್ರೋಫಿ ಪಡೆಯಲು ನಿರಾಕರಿಸಿ, ಕ್ರೀಡಾಂಗಣದಿಂದ ನಿರ್ಗಮಿಸಿತು. 2025ರ ಪುರುಷರ ತಂಡವು ಏಷ್ಯಾ ಕಪ್ ಗೆದ್ದಾಗಲೂ ಸೂರ್ಯಕುಮಾರ್ ಯಾದವ್ ಅವರ ಬಳಗವು ನಖ್ವಿ ಅವರಿಂದ ಟ್ರೋಫಿ ಪಡೆದಿರಲಿಲ್ಲ.

ಕಾಶ್ಮೀರದ ಪೆಹಲ್ಗಾಮ್‌ನಲ್ಲಿ ಭಯೋತ್ಪಾದಕರು 26 ಜನರನ್ನು ಹತ್ಯೆ ಮಾಡಿದ್ದನ್ನು ಪ್ರತಿಭಟಿಸಲು ಭಾರತದ ಕ್ರಿಕೆಟಿಗರು ಈ ಹೆಜ್ಜೆ ಇಟ್ಟಿದ್ದಾರೆ. ಈ ಕುರಿತು ಎಸಿಸಿ ಮುಖ್ಯಸ್ಥ ನಖ್ವಿ ಅವರು ಯಾವುದೇ ರೀತಿಯ ತಕರಾರು ಸಲ್ಲಿಸಿಲ್ಲ ಎಂದು ಶುಕ್ಲಾ ಹೇಳಿದ್ದಾರೆ.

# ಸಮಾಜದಲ್ಲಿ ನೆಮ್ಮದಿ ಜೀವನಕ್ಕೆ ಪ್ರಜಾಪ್ರಭುತ್ವದ ಪಾತ್ರ ಮುಖ್ಯ

### ಅರಕಲಗೂಡು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಶಾಸಕ ಎ.ಮಂಜು

• ಪ್ರಜೋದಯ ವರದಿ

**ಅರಕಲಗೂಡು:** ಸಮಾಜದಲ್ಲಿ ಸಾಮಾನ್ಯ ಜನರು ನೆಮ್ಮದಿಯ ಜೀವನ ನಡೆಸಲು ಪ್ರಜಾ ಪ್ರಭುತ್ವದ ಆಡಳಿತ ಪ್ರಮುಖ ಪಾತ್ರ ವಹಿಸುತ್ತದೆಂದು ಶಾಸಕ ಎ.ಮಂಜು ಅವರು ಹೇಳಿದರು.

ಪಟ್ಟಣದ ಡಿ.ದೇವರಾಜ ಅರಸು ಭವನದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನ ಹಾಗೂ ಕಾನೂನಿಗೆ ಗೌರವ ನೀಡದಿರುವವರೆಗೆ ಸೂಕ್ತ ರಕ್ಷಣೆ ಸಿಗಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸುವುದು ಅತ್ಯಂತ ಅಗತ್ಯವಾಗಿದೆ. ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಪ್ರಜಾಪ್ರಭುತ್ವ, ಸಂವಿಧಾನ, ಹಕ್ಕುಗಳು ಹಾಗೂ ಕರ್ತವ್ಯಗಳ ಕುರಿತು ಅರಿವು ಮೂಡಿಸಬೇಕು ಎಂದರು.

ರಾಜ್ಯದ ಎಲ್ಲಾ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಪಾಠವನ್ನು ಕಡ್ಡಾಯವಾಗಿ ಬೋಧಿಸುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಪ್ರಜಾಪ್ರಭುತ್ವದ ಮಹತ್ವವನ್ನು ಸಾರು



ವಂತಹ ಮಹತ್ವದ ಕಾರ್ಯಕ್ರಮಕ್ಕೆ ಜವಾಬ್ದಾರಿಯುತ ಅಧಿಕಾರಿಗಳು ಗೈರಾಗಿರುವುದಕ್ಕೆ ಶಾಸಕ ಎ.ಮಂಜು ಅಸಮಾಧಾನ ವ್ಯಕ್ತಪಡಿಸಿದರು. ಸಂವಿಧಾನದ ಅಡಿಯಲ್ಲಿ ಸಂಬಳ ತೆಗೆದುಕೊಳ್ಳಲ್ವಾ ಅಧಿಕಾರಿಗಳು ಎಂದು ಪ್ರಶ್ನಿಸಿದರು. ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳು ಅನ್‌ಫಿಟ್ ಎಂದು ಕಿಡಿಕಾರಿದರು.

ಸರ್ಕಾರಿ ಕಾರ್ಯಕ್ರಮಗಳ ಮಹತ್ವವನ್ನು ಅಧಿಕಾರಿಗಳು ಅರಿತು ಜವಾಬ್ದಾರಿಯಿಂದ ನಡೆದುಕೊಳ್ಳಬೇಕೆಂದು ತಾಕೀತು ಮಾಡಿದರಲ್ಲದೆ ಕಾರ್ಯಕ್ರಮಕ್ಕೆ ಗೈರಾದ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡುವಂತೆ ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರಿಗೆ ಸೂಚಿಸಿದರು.

ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಜಾಪ್ರಭುತ್ವ ನಮ್ಮ ದೇಶದ ಕಿರೀಟ. ಅದಕ್ಕೆ ನಾವೆಲ್ಲರೂ ಗೌರವ ನೀಡಬೇಕು. ನಮ್ಮ ದೇಶದಲ್ಲಿ ವಿವಿಧ ಭಾಷೆ, ಜಾತಿ ಹಾಗೂ ಉಪ ಜಾತಿಗಳಿಗೆ ಸೇರಿದ ಜನರು ವಾಸಿಸುತ್ತಿದ್ದಾರೆ. ಎಲ್ಲರಿಗೂ ಸಮಾನ ಹಕ್ಕು ಮತ್ತು ಅವಕಾಶಗಳನ್ನು ಕಲ್ಪಿಸುವ ವ್ಯವಸ್ಥೆಯೇ ಪ್ರಜಾಪ್ರಭುತ್ವ. ವೈವಿಧ್ಯತೆಯ ನಡುವೆಯೂ ಪ್ರತಿಯೊಬ್ಬರಿಗೂ ಸಮಾನ ಸ್ಥಾನಮಾನ ಹಾಗೂ ಹಕ್ಕುಗಳನ್ನು ನೀಡುವುದು ನಮ್ಮ ಸಂವಿಧಾನದ ವಿಶೇಷತೆಯಾಗಿದೆ. ಹೀಗಾಗಿ ಸಂವಿಧಾನದ ಆಶಯಗಳನ್ನು ಪ್ರತಿ ಯೊಬ್ಬರೂ ಅರಿತುಕೊಂಡು ಗೌರವಿಸುವುದು ಅಗತ್ಯ ಎಂದು ಹೇಳಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಪುಷ್ಪಲತಾ, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪಿ.ನಾರಾಯಣ, ಸಮಾಜ ಕಲ್ಯಾಣಾಧಿಕಾರಿ ಮಂಜುನಾಥ್, ವಕೀಲರ ಸಂಘದ ಅಧ್ಯಕ್ಷ ಬಿ.ಟಿ.ಚಂದ್ರಶೇಖರ್ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಹಾಗೂ ಗಣ್ಯರು ಉಪಸ್ಥಿತರಿದ್ದರು.

## ಜೆನ್ ಝೀಗಳ ನಾಯಕತ್ವ, ಜವಾಬ್ದಾರಿ ಹೊತ್ತುಕೊಳ್ಳಬೇಕು

• ಪ್ರಜೋದಯ ವರದಿ



**ಚೆನ್ನೈ:** ಜೆನ್ ಝೀ ಮತ್ತು ಜೆನ್ ಆಲ್ಫಾ ಪೀಳಿಗೆಯವರು ನಾಯಕತ್ವ ವಹಿಸಿಕೊಳ್ಳಬೇಕು ಮತ್ತು ಜವಾಬ್ದಾರಿಗಳನ್ನು ಹೊತ್ತುಕೊಳ್ಳಬೇಕೆಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಗಳವಾರ ಹೇಳಿದರು.

ಡಾ.ಎಂ.ಜಿ.ಆರ್ ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಯ 36ನೇ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶವು ತಮಗೆ ಏನು ಮಾಡಿದೆ ಎಂದು ಕೇಳುವ ಬದಲು, ತಾವು ದೇಶಕ್ಕೆ ಏನು ಕೊಡುಗೆ ನೀಡಬಹುದು ಎಂಬುದನ್ನು ಯೋಚಿಸುವ ಮೂಲಕ ದೇಶಕ್ಕೆ ಆದ್ಯತೆ ನೀಡಬೇಕೆಂದು ಕರೆ ನೀಡಿದರು.

ಯುವಜನರ ಆಕಾಂಕ್ಷೆಗಳನ್ನು ಆಲಿಸಲು ದೇಶ ಸಿದ್ಧವಿದೆ. ಇದೇ ವೇಳೆ ಯುವಜನರೂ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯ ಪ್ರಜ್ಞೆಯೊಂದಿಗೆ ಮುನ್ನಡೆಯಬೇಕೆಂದು ಸಲಹೆ ನೀಡಿದರು.

ಪದವಿ ಪಡೆಯುತ್ತಿರುವ ವಿದ್ಯಾರ್ಥಿಗಳು ತಮ್ಮ ಕ್ಷೇತ್ರಗಳಲ್ಲಿ ನಾಯಕತ್ವ ವಹಿಸಿಕೊಳ್ಳಬೇಕು ಮತ್ತು ರಾಷ್ಟ್ರೀಯ ಹಿತಾಸಕ್ತಿ ವಿಷಯದಲ್ಲಿ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳಬಾರದು ಎಂದರು.

ರಷ್ಯಾ ಉಕ್ರೇನ್ ಯುದ್ಧ, ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ಕಚ್ಚಾ ತೈಲ, ಅನಿಲ, ರಸಗೊಬ್ಬರ ಪೂರೈಕೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ, ಜಾಗತಿಕ ಅನಿಶ್ಚಿತತೆ ಉಂಟಾಗಿದ್ದರೂ ಭಾರತ ಸ್ಥೂಲ ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಂಡಿದೆ. ಜೊತೆಗೆ ಶೇ.7.8ರಷ್ಟು ಬೆಳವಣಿಗೆ ದರವನ್ನೂ ಸಾಧಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಇದು ಸಾಧ್ಯವಾಗಿದೆ ಎಂದು ಹೇಳಿದರು.

ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನೀಯರಿಂಗ್, ಅಲೈಡ್ ಹೆಲ್ತ್ ಸೈನ್ಸ್, ಕಾನೂನು ಮತ್ತು ನಿರ್ವಹಣಾ ವಿಭಾಗಗಳಲ್ಲಿ 3,200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರಗಳನ್ನು ಸ್ವೀಕರಿಸಿದರು.

## ಬಾಹ್ಯಾಕಾಶದಲ್ಲಿ ಶಸ್ತ್ರಾಸ್ತ್ರ ನಿಯೋಜನೆಯನ್ನು ದೃಢಪಡಿಸಿದ ಅಮೇರಿಕಾ

• ಪ್ರಜೋದಯ ವರದಿ

**ವಾಷಿಂಗ್ಟನ್:** ಶಸ್ತ್ರಾಸ್ತ್ರಗಳನ್ನು ಬಾಹ್ಯಾಕಾಶದಲ್ಲಿ ನಿಯೋಜಿಸಿರುವುದಾಗಿ ಇದೇ ಮೊದಲ ಬಾರಿಗೆ ಅಮೇರಿಕಾ ಹೇಳಿಕೊಂಡಿದೆ.

ನಾವು ಶಸ್ತ್ರಾಸ್ತ್ರಗಳನ್ನು ಬಾಹ್ಯಾಕಾಶದಲ್ಲಿ ನಿಯೋಜಿಸಿರುವುದು ನಿಜ ಎಂದು ಅಮೇರಿಕಾದ ವಾಯುಪಡೆ ಕಾರ್ಯದರ್ಶಿಗಳು ಖಚಿತಪಡಿಸಿದ್ದಾರೆ. ಅವುಗಳ ಕಾರ್ಯವೈಖರಿ ಬಗ್ಗೆ ಹೆಚ್ಚಿನ ವಿವರ ನೀಡಲಿಲ್ಲ. ನಮ್ಮ ವಾಯುಪಡೆಯು ಹೆಚ್ಚು ಸ್ವಾಯತ್ತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುತ್ತಿದ್ದು, 2032ರ ಹೊತ್ತಿಗೆ ಆಮೂಲಾಗ್ರ ಬದಲಾವಣೆ ಕಾಣಲಿದ್ದೇವೆ. ಸಂಭವನೀಯ ಬೆದರಿಕೆಯನ್ನು ಎದುರಿಸಲು ಸಿದ್ಧತೆಗಳನ್ನು ಹೆಚ್ಚಿಸುತ್ತಿದ್ದೇವೆಂದು ಹೇಳಿದ್ದಾರೆ. ಶತ್ರು ದೇಶಗಳ ಕ್ರಮದಿಂದ ನಮ್ಮ ಪಡೆ ಗಳನ್ನು ರಕ್ಷಿಸಲು ಬಾಹ್ಯಾಕಾಶದಲ್ಲಿ



ಶಸ್ತ್ರಾಸ್ತ್ರ ವನ್ನು ನಿಯೋಜಿಸುವುದು ಅನಿವಾರ್ಯವಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.

ಬಾಹ್ಯಾಕಾಶದಿಂದ ಉಡಾವಣೆ ಮಾಡಬಲ್ಲ ಹೊಸ ಉಪಗ್ರಹ ನಿಗ್ರಹ ಶಸ್ತ್ರಾಸ್ತ್ರಗಳನ್ನು ರಷ್ಯಾ ಅಭಿವೃದ್ಧಿಪಡಿಸುತ್ತಿದೆಂದು ಅಮೇರಿಕಾ 2024ರಲ್ಲಿ ಹೇಳಿತ್ತು. ಶಸ್ತ್ರಾಸ್ತ್ರಗಳನ್ನು ಬಾಹ್ಯಾಕಾಶದಲ್ಲಿ ನಿಯೋಜಿಸುವ ಯೋಜನೆಯನ್ನು 2020ರಲ್ಲಿ ಅಮೇರಿಕಾ ಆರಂಭಿಸಿತ್ತು ಎಂದು ಮೂಲಗಳು ತಿಳಿಸಿವೆ.

## ಅಂತಿಮ ಹಂತ ತಲುಪಿದ ನೇಪಾಳದ ಚಿಲಿಮೆ ಸುರಂಗ ರಕ್ಷಣಾ ಕಾರ್ಯ

• ಪ್ರಜೋದಯ ವರದಿ

**ನೇಪಾಳ:** ನೇಪಾಳದ ಚಿಲಿಮೆ ಜಲವಿದ್ಯುತ್ ಕೇಂದ್ರಲ್ಲಿ ಭಾರತ, ನೇಪಾಳದ ವಿಶೇಷ ಸುರಂಗ ರಕ್ಷಣಾ ತಂಡಗಳು ನಡೆಸುತ್ತಿರುವ ಕಾರ್ಯಾಚರಣೆಯು ಅಂತಿಮ ಹಂತ ತಲುಪಿದ್ದು, ಭೂಗತ ವಿದ್ಯುತ್‌ಶಕ್ತಿ ಕೇಂದ್ರ ತಲುಪುವ ಮಾರ್ಗ ಸುಗಮಗೊಂಡಿದೆ. ಇಲ್ಲಿಯೇ ಆರು ಮಂದಿ ಸಿಲುಕಿದ್ದಾರೆಂದು ಅಂದಾಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿರಂತರವಾಗಿ ಹರಿದುಬರುತ್ತಿದ್ದ ನೀರು ಹಾಗೂ ದೊಡ್ಡದಾದ ಬಂಡೆಗಲ್ಲುಗಳಿಂದ ಕಾರ್ಯಾಚರಣೆಯ ವೇಳೆ ದೊಡ್ಡ ಮಟ್ಟದ ಸವಾಲುಗಳುಎದುರಾದವು. ವೀಲ್ ಲೋಡರ್‌ಗಳನ್ನು ಬಳಸಿಕೊಂಡು, ಅಲ್ಲಿದ್ದ ತ್ಯಾಜ್ಯವನ್ನು ಹೊರಹಾಕಲಾಗಿದೆ.

2 ತಂಡದವರು ಸತತ ಕಾರ್ಯಾಚರಣೆ ನಡೆಸಿ ನಿಗದಿತ ಸ್ಥಳ ತಲು ಪಲು ಯಶಸ್ವಿಯಾಗಿದ್ದಾರೆಂದು ನೇಪಾಳದ ಭಾರತದ ರಾಯಭಾರಿ ನವೀನ್ ಶ್ರೀ ವಾಸ್ತವ ತಿಳಿಸಿದ್ದಾರೆ.

## ಶೇಖ್ ಹಸೀನಾರ 7 ಆಪ್ತರಿಗೆ ಗಲ್ಲು ಶಿಕ್ಷೆ

• ಪ್ರಜೋದಯ ವರದಿ

**ಢಾಕಾ:** 2024ರ ದಂಗೆಯನ್ನು ಹತ್ತಿಕ್ಕಲು ಪ್ರಯತ್ನಿಸಿದ ಆರೋಪದ ಮೇಲೆ ಬಾಂಗ್ಲಾದೇಶದ ನ್ಯಾಯಾಲಯವೊಂದು ಮಂಗಳವಾರ ಪದಚ್ಯುತ ಪ್ರಧಾನಿ ಶೇಖ್ ಹಸೀನಾರ ಏಳು ಆಪ್ತ ನಾಯಕರಿಗೆ(ಇಬ್ಬರು ಮಾಜಿ ಸಚಿವರು ಸೇರಿದಂತೆ) ಗಲ್ಲು ಶಿಕ್ಷೆ ವಿಧಿಸಿದೆ.

ಬಾಂಗ್ಲಾದೇಶದಲ್ಲಿ ವಿದ್ಯಾರ್ಥಿ ದಂಗೆಯ ನಂತರ ಭಾರತಕ್ಕೆ ಬಂದು ಆಶ್ರಯ ಪಡೆದಿರುವ ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಪಕ್ಷದ ಏಳು ನಾಯಕರಿಗೆ, ಕೊಲೆ ಹಾಗೂ ಹತ್ಯೆಗಳಿಗೆ ಪ್ರಚೋದನೆ ನೀಡುವುದು ಸೇರಿ ಮಾನವೀಯತೆಯ ವಿರುದ್ಧದ ಅಪರಾಧಗಳಿಗಾಗಿ ತಪ್ಪಿತಸ್ಥರೆಂದು ಕೋರ್ಟ್ ಘೋಷಿಸಿದೆ.

ಅವಾಮಿ ಲೀಗ್ ಪಕ್ಷದ ಮಾಜಿ ಪ್ರಧಾನ ಕಾರ್ಯದರ್ಶಿ ಒಬೈದುಲ್ ಖಾದರ್ ಮತ್ತು ಮತ್ತೊಬ್ಬ ಮಾಜಿ ಸಚಿವ ಮೊಹಮ್ಮದ್ ಅಲಿ ಅರಾಫತ್ ಸೇರಿ ಏಳು ನಾಯಕರಿಗೆ ನ್ಯಾಯ ಮೂರ್ತಿ ನಜ್ರುಲ್ ಇಸ್ಲಾಂ ಚೌಧರಿ ನೇತೃತ್ವದ ಮೂವರು ಸದಸ್ಯರ ನ್ಯಾಯ ಮಂಡಳಿ ಗಲ್ಲು ಶಿಕ್ಷೆ ವಿಧಿಸಿದೆ. ಈ ತೀರ್ಪಿನಿಂದ ನಮಗೆ ಸಂತೋಷವಾಗಿದೆ ಎಂದು ಸರ್ಕಾರಿ ಅಭಿಯೋಜಕ ಎಂಡಿ ಅಮೀನುಲ್ ಇಸ್ಲಾಂ ಹೇಳಿದ್ದಾರೆ.

ವಿಶ್ವಸಂಸ್ಥೆಯ ಪ್ರಕಾರ, 2024ರ ಜುಲೈ ಮತ್ತು ಆಗಸ್ಟ್ ನಡುವೆ ವಿದ್ಯಾರ್ಥಿಗಳ ನೇತೃತ್ವದ ದಂಗೆಯನ್ನು ಹಸೀನಾ ಸರ್ಕಾರವು ಹತ್ತಿಕ್ಕಲು ಪ್ರಯತ್ನಿಸಿದಾಗ ನಡೆದ ಹಿಂಸಾಚಾರದಲ್ಲಿ 1,400 ಜನರು ಸಾವನ್ನಪ್ಪಿದ್ದರು. ಹಸೀನಾ ಅವರ 15 ವರ್ಷಗಳ ಆಳ್ವಿಕೆಯು 2024ರ ಆಗಸ್ಟ್‌ನಲ್ಲಿ ಅಂತ್ಯಗೊಂಡಿತು. ಆ ಸಮಯದಲ್ಲಿ ಅವರು ಹೆಲಿಕಾಪ್ಟರ್ ಮೂಲಕ ನೆರೆಯ ಭಾರತಕ್ಕೆ ಪಲಾಯನ ಮಾಡಿದರು. ಈಗ ಭಾರತದಲ್ಲೇ ಅಜ್ಞಾತವಾಸದಲ್ಲಿದ್ದಾರೆ.

## ಹೆಚ್ಚು ಮಾತನಾಡಿದಷ್ಟು ಹೊಸ ಆಲೋಚನೆಗಳು ಬರುತ್ತವೆ

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿಗಳು ಹೆಚ್ಚು ಮಾತನಾಡಬೇಕು. ಮೌನವಾಗಿರು ವುದು ಅವರ ಲಕ್ಷಣವಲ್ಲ. ಹೆಚ್ಚು ಹೆಚ್ಚು ಮಾತನಾಡಿದಷ್ಟು ಹೊಸ ಹೊಸ ಆಲೋಚನೆಗಳು ಬರುತ್ತವೆಂದು ಸರ್ಕಾರಿ ಕಲಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಡಿ.ಜಿ. ಕೃಷ್ಣೇಗೌಡ ಅವರು ಹೇಳಿದರು.

ಇತ್ತೀಚೆಗೆ ನಗರದ ಎಂ.ಜಿ. ರಸ್ತೆಯಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನೆ ಮತ್ತು ಕಾಲೇಜಿನ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಕಾಲೇಜಿನ ಅಭಿವೃದ್ಧಿಯಲ್ಲಿ ಹಲವಾರು ವ್ಯಕ್ತಿಗಳ ಅಪಾರ ಶ್ರಮವಿದೆ. ಕಾಲೇಜಿಗೆ 20 ವರ್ಷ ತುಂಬಿರುವ ಈ ಸುಸಂದರ್ಭದಲ್ಲಿ ಅವರ ಕೊಡುಗೆಯನ್ನು ನೆನೆಯುವುದು ನಮ್ಮ ಕರ್ತವ್ಯ. ಹಾಸನದ ಸರ್ಕಾರಿ ಕಾಲೇಜುಗಳಲ್ಲಿ ಸಮವಸ್ತ್ರ ಜಾರಿಗೆ ತಂದ ಪ್ರಥಮ ಕಾಲೇಜು ಇದಾಗಿದೆ. ಅಷ್ಟೇ ಅಲ್ಲದೇ, ಪತ್ರಿಕೋದ್ಯಮ ಶಿಕ್ಷಣಕ್ಕೆ ಜಿಲ್ಲೆಯಲ್ಲಿ ಮುನ್ನುಡಿ ಬರೆದ ಕಾಲೇಜು ಇದಾಗಿದ್ದು, ಬಹಳಷ್ಟು




ಮೊದಲುಗಳಿಗೆ ಬುನಾದಿಯಾಗಿದೆ. ಸಂಸ್ಥೆಯನ್ನು ಕಟ್ಟುವುದು ಒಂದು ರೀತಿಯ ಸವಾಲಾದರೆ, ಕಾಲೇಜನ್ನು ಉತ್ತಮ ರೀತಿಯಲ್ಲಿ ಬೆಳೆಸುವುದು ಒಂದು ರೀತಿಯ ಸವಾಲು ಎಂದು ಅಭಿಪ್ರಾಯಪಟ್ಟರು.

ಪಠ್ಯೇತರ ಚಟುವಟಿಕೆಗಳನ್ನು ಪಠ್ಯೇತರ ಚಟುವಟಿಕೆ ಎಂದು ಭಾವಿಸದೆ ಅದನ್ನು ಸಹಪಠ್ಯ ಚಟುವಟಿಕೆಗಳು ಎನ್ನುವ ಭಾವನೆ ವಿದ್ಯಾರ್ಥಿಗಳಲ್ಲಿ ಮೂಡಬೇಕು. ಮೂಲಜ್ಞಾನಕ್ಕೆ ಪೂರಕ ವಾಗಿ ಅವುಗಳು ಅಸ್ತಿತ್ವದಲ್ಲಿರಬೇಕು. ಶಿಕ್ಷಣದಿಂದ ಸ್ವಾತಂತ್ರವಾಗಿ ಬದುಕು ಕಟ್ಟಿಕೊಳ್ಳಲು ಸಾಧ್ಯ. ಸಾಮರ್ಥ್ಯಕ್ಕೆ ಅನುಗುಣವಾದ ಮಾರ್ಗವನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಬೇಕು. ಸಹಪಠ್ಯ ಚಟುವಟಿಕೆಗಳಿಂದ ನಿಮ್ಮ ಸಾಮರ್ಥ್ಯದ ಅರಿವು ನಿಮಗಾಗುತ್ತದೆಂದು ನೆರೆದಿದ್ದ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪ್ರಾಂಶುಪಾಲ ಪ್ರೊ.ಬಾಲಕೃಷ್ಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾಲೇಜುಗಳ ಬೆಳವಣಿಗೆಗಳಿಗೆ ಸ್ಥಳೀಯ ರಾಜಕಾರಣಿಗಳ ಕೊಡುಗೆ ಅಪಾರ. ಎಲ್ಲರನ್ನು ಪ್ರೋತ್ಸಾಹಿಸುವ ಗುಣ ಇಲ್ಲಿನ ಮಣ್ಣಿಗೆ ಮತ್ತು ಜನರಿಗಿದೆ. ಇಲ್ಲಿ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯ. ಸ್ವಾವಲಂಬನೆಯ ಬದುಕಿಗೆ ಶಿಕ್ಷಣ ಅಗತ್ಯ ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ವಾರ್ಷಿಕ ಸಂಚಿಕೆ ಜ್ಞಾನಸಿರಿಯನ್ನು ಬಿಡುಗಡೆಗೊಳಿಸಲಾಯಿತು. ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಂಸ್ಥಾಪಕ ಪ್ರಾಂಶುಪಾಲರಾದ ಡಾ.ಡಿ.ಜಿ.ಕೃಷ್ಣೇಗೌಡ ಅವರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿನಿಯರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಕಾರ್ಯಕ್ರಮದಲ್ಲಿ ವಿವಿಧ ಸಮಿತಿಯ ಸಂಚಾಲಕರು ಹಾಗೂ ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಪುರುಷೋತ್ತಮ, ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರು ಹಾಜರಿದ್ದರು.

## ಪ.ಬಂಗಾಳ ಉಪಚುನಾವಣೆ : ಟಿಎಂಸಿ ಬಂಡಾಯ ಗುಂಪಿನಿಂದ ಅಭ್ಯರ್ಥಿಗಳು ಕಣಕ್ಕೆ

• ಪ್ರಜೋದಯ ವರದಿ

**ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭೆಯ (ಅ.6 ರಂದು) ನಂದಿಗ್ರಾಮ ಹಾಗೂ ರೆಜಿನಗರ್ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗೆ ವಿರೋಧ ಪಕ್ಷದ ನಾಯಕ ರಿತಬ್ರತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಬಂಡಾಯ ಬಣವು ಅಭ್ಯರ್ಥಿಗಳನ್ನು ಘೋಷಿಸಿದೆ.

ಮಮತಾ ಬ್ಯಾನರ್ಜಿ ಗುಂಪಿನ ಜೊತೆಗೆ ಪಕ್ಷದ ಹೆಸರು, ಚಿಹ್ನೆ ಕುರಿತಂತೆ ವಿವಾದಗಳು ಮುಂದುವರಿದಿರುವಂತೆಯೇ, ಉಭಯ ಬಣಗಳ ನಡುವೆ ಚುನಾವಣಾ ಹಣಾಹಣಿಗೆ ವೇದಿಕೆ ಸಿದ್ಧಗೊಂಡಿದೆ.

ಪೂರ್ವ ಮೇದಿನಿಪುರ ಜಿಲ್ಲೆಯ ನಂದಿಗ್ರಾಮದಿಂದ ಮೊಹಮ್ಮದ್ ಎಟೆಶಮುಲ್ ಹಕ್, ಮುರ್ಷಿದಾಬಾದ್ ಜಿಲ್ಲೆಯ ರೆಜಿನಗರ ಕ್ಷೇತ್ರದಿಂದ ಸೈಫ್‌ಜ್ಜಮನ್ ಶೇಕ್ ಅವರನ್ನು ಬಂಡಾಯ ಬಣವು ಕಣಕ್ಕಿಳಿಸಿದೆ.

2026ರ ವಿಧಾನಸಭಾ ಚುನಾವಣೆಯಲ್ಲಿ ಹೀನಾಯ ಸೋಲಿನ ಬಳಿಕ ಟಿಎಂಸಿ ಇಬ್ಭಾಗ ವಾಗಿದ್ದು, ಉಪ ಚುನಾವಣೆಯು ಉಭಯ ಬಣಗಳಿಗೆ ಮಹತ್ವದ್ದಾಗಿದೆ. ನಂದಿ ಗ್ರಾಮ ಕ್ಷೇತ್ರದಿಂದ ಮಮತಾ ಬ್ಯಾನರ್ಜಿ ಕಣಕ್ಕಿಳಿಯಲು ನಿರ್ಧರಿಸಿದರೆ ಅಭ್ಯರ್ಥಿಯನ್ನು ನಿಲ್ಲಿಸುವುದಿಲ್ಲ ಎಂದು ಬಂಡಾಯ ಬಣವು ಈ ಹಿಂದೆ ಘೋಷಿಸಿತ್ತು. ಆದರೆ, ಚುನಾವಣೆಗೆ ಸ್ಪರ್ಧಿಸದಿರಲು ಮಮತಾ ನಿರ್ಧರಿಸಿದ್ದಾರೆ.



ಮಮತಾ ಬಣದಿಂದ ನಂದಿಗ್ರಾಮ ಕ್ಷೇತ್ರದಿಂದ ಹೊಸ ಮುಖವಾದ ಸಂಚಿತಾ ಪ್ರದಾನ್, ರೆಜಿನಗರ್ ಕ್ಷೇತ್ರದಿಂದ ರಬಿಬುಲ್ ಆಲಂ ಚೌಧರಿ ಅವರನ್ನು ಕಣಕ್ಕಿಳಿಸಿದೆ.

## ಚ.ರಾ.ಪಟ್ಟಣದಲ್ಲಿ ವಿಜೃಂಭಣೆಯ ಗೌರಿ-ಗಣೇಶ ಪ್ರತಿಷ್ಠಾಪನೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಗಣೇಶ ಚತುರ್ಥಿ ಅಂಗವಾಗಿ ಪಟ್ಟಣ ಸೇರಿ ತಾಲ್ಲೂಕಿನಾದ್ಯಂತ ಸೋಮವಾರ ಶ್ರೀ ಗೌರಿ ಹಾಗು ಗಣೇಶ ಮೂರ್ತಿಗಳ ಪ್ರತಿಷ್ಠಾಪನಾ ಕಾರ್ಯಕ್ರಮ ಭಕ್ತಿ ಹಾಗು ಸಂಭ್ರಮದಿಂದ ನೆರವೇರಿದವು. ಮನೆಗಳು, ದೇವಾಲಯಗಳು ಹಾಗೂ ವಿವಿಧ ಗಣಪತಿ ಮಂಟಪಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳನ್ನು ಆಯೋಜಿಸಲಾಗಿತ್ತು.

ಪಟ್ಟಣದ ಗಣಪತಿ ಪೆಂಡಾಲ್‌ನಲ್ಲಿ ಸೋಮವಾರ ಮಧ್ಯಾಹ್ನ ಶ್ರೀ ಗೌರಮ್ಮ ದೇವಿಯನ್ನು ಗಂಗೆ ಪೂಜೆಯೊಂದಿಗೆ ಕರೆತಂದು ವಿಧಿವಿಧಾನಗಳ ಮೂಲಕ ಪ್ರತಿಷ್ಠಾಪಿಸಲಾಯಿತು. ಬಳಿಕ ಪುಷ್ಪ ಮಂಟಪದಲ್ಲಿ ಶ್ರೀ ಪ್ರಸನ್ನ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ವಿವಿಧ ಬಗೆಯ ಪುಷ್ಪಗಳಿಂದ ಅಲಂಕರಿಸಲಾಯಿತು. ನಂತರ ಗಣಪತಿಗೆ ವಿಶೇಷ ಪೂಜೆ, ಅಭಿಷೇಕ ಹಾಗೂ ವಿವಿಧ ಧಾರ್ಮಿಕ ಕೈಂಕರ್ಯಗಳು ನೆರವೇರಿದವು.

ಮಹಿಳೆಯರು ಹಾಗು ಮಕ್ಕಳು ಸೇರಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪೂಜಾ ಕಾರ್ಯಕ್ರಮ ದಲ್ಲಿ ಪಾಲ್ಗೊಂಡಿದ್ದರು. ಹೂವು, ಕಾಯಿ, ಸಿಹಿ ಕಡುಬು, ಕರಂಜಿಕಾಯಿ, ಸಜ್ಜಿಗೆ, ಲಡ್ಡು ಹಾಗೂ ವಿವಿಧ ಹಣ್ಣುಗಳನ್ನು ಗಣಪತಿಗೆ ಸಮರ್ಪಿಸಿ ಗೌರಿಗಣೇಶರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು.

ಗಣೇಶ ಚತುರ್ಥಿಯಂದು ಗೌರಿ ಹಾಗೂ ವಿನಾಯಕ ಮೂರ್ತಿಗಳನ್ನು ಮನೆಗಳಲ್ಲಿ ಪ್ರತಿಷ್ಠಾಪಿಸಿ ಮೂರನೇ ದಿನ ವಿಸರ್ಜಿಸುವ ಸಂಪ್ರದಾಯ ಹಲವು ಕಡೆಗಳಲ್ಲಿ ಇದೆ. ಆದರೆ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಗಣೇಶ ಮೂರ್ತಿಯನ್ನು ಸುಮಾರು ಒಂದು ತಿಂಗಳ ಕಾಲ ಪ್ರತಿಷ್ಠಾಪಿಸಿ ಪ್ರತಿದಿನ ಪೂಜೆ ಸಲ್ಲಿಸುವ ವಿಶೇಷ ಆಚರಣೆ ಮುಂದುವರಿದಿದೆ. ಗ್ರಾಮ ಗಳಲ್ಲಿ ಪ್ರತಿ ದಿನ ಒಂದೊಂದು ಕುಟುಂಬದವರು ಗಣಪತಿಗೆ ಪೂಜೆ ಸಲ್ಲಿಸುವುದು ಇಲ್ಲಿನ ವಿಶೇಷತೆಯಾಗಿದೆ.

ಗಣೇಶೋತ್ಸವದ ಅಂಗವಾಗಿ ವಿವಿಧ ಗ್ರಾಮಗಳಲ್ಲಿ ಸಾಂಸ್ಕೃತಿಕ ಹಾಗು ಮನರಂಜನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಭಕ್ತರಿಗೆ ಪ್ರಸಾದ ವಿನಿಯೋಗವೂ ನಡೆಯಲಿದೆ. ಹಬ್ಬದ ಹಿನ್ನಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಮನೆ-ಮನೆಗೂ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ಯುವಕರು ಹಾಗೂ ವಿವಿಧ ಸಂಘಟನೆಗಳು ಗಣಪತಿ ಮಂಟಪಗಳ ಅಲಂಕಾರಕ್ಕೆ ವಿಶೇಷ ಆದ್ಯತೆ ನೀಡಿದ್ದಾರೆ.

ಪಟ್ಟಣದ ಗಣಪತಿ ಪೆಂಡಾಲ್‌ನಲ್ಲಿ ನಡೆದ ಶ್ರೀ ಪ್ರಸನ್ನ ಗಣಪತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ, ಮಾಜಿ ವಿಧಾನ ಪರಿಷತ್ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಬಿಜೆಪಿ ಮುಖಂಡ ಸಿ. ಆರ್.ಚಿದಾನಂದ್, ಟಿಎಪಿಸಿಎಂಎಸ್ ಅಧ್ಯಕ್ಷ ಮೆಡಿಕಲ್ ವೆಂಕಟೇಶ್, ಪರಿಸರ ಪ್ರೇಮಿ ಸಿ. ಎನ್.ಅಶೋಕ್, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಹೆಚ್.ಎನ್.ಲೋಕೇಶ್, ಪ್ರಮುಖರಾದ ಜೈದೀಪ್‌ಗೌಡ ಇದ್ದರು.

## ಅರಸೀಕೆರೆ ಪ್ರಸನ್ನ ಗಣಪತಿ ಮಹೋತ್ಸವಕ್ಕೆ ಚಾಲನೆ



• ಪ್ರಜೋದಯ ವರದಿ

**ಅರಸೀಕೆರೆ:** ರಾಜ್ಯದಲ್ಲೇ ಪ್ರಸಿದ್ಧಿಯಾಗಿರುವ ಪ್ರಸನ್ನ ಗಣಪತಿಯ 85ನೇ ವರ್ಷದ ಮಹೋತ್ಸವಕ್ಕೆ ಚಾಲನೆ ದೊರೆತಿದೆ.

ಭಾದ್ರಪದ ಮಾಸದ ಚೌತಿಯಂದು ತನ್ನ ಆಸ್ಥಾನ ಮಂಟಪದಲ್ಲಿ ವಿರಾಜಮಾನನಾಗಿ ಮುಂದಿನ 65 ದಿನಗಳ ಕಾಲ ತನ್ನ ಭಕ್ತರಿಂದ ತ್ರಿಕಾಲ ಪೂಜೆ ಪಡೆದು ದರ್ಶನ ಭಾಗ್ಯ ಕರುಣಿ ಸುವ ಪ್ರಸನ್ನ ಗಣಪತಿಯನ್ನು ನೋಡುವುದೇ ಕಣ್ಣಿಗೆ ಹಬ್ಬ.

ಪ್ರತಿ ವರ್ಷದಂತೆ ಈ ವರ್ಷವೂ ಸಹ ಶಿಲ್ಪಿ ಮಹಾದೇವು ಅವರು ನಿರ್ಮಿಸಿರುವ 9 ಅಡಿ ಎತ್ತರದ ಆಸೀನ ಬಂಗಿಯಲ್ಲಿರುವ ಬೃಹತ್ ಗಾತ್ರದ ಮಣ್ಣಿನ ಪ್ರಸನ್ನ ಗಣಪತಿ ಮೂರ್ತಿ ಮೂಡಿ ಬಂದಿದ್ದು ಭಕ್ತರ ಕಣ್ಮನ ಸೆಳೆಯುತ್ತಿದೆ.

ಪೂರ್ಣ ಕುಂಭದೊಂದಿಗೆ ಮಂಗಳ ವಾದ್ಯ ಸಮೇತ ಪ್ರಸನ್ನ ಗಣಪತಿಯನ್ನು ಆಸ್ಥಾನ ಮಂಟಪಕ್ಕೆ ಮೆರವಣಿಗೆ ಮೂಲಕ ಕರೆ ತರಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಸೇರಿ ನಾನಾ ರಾಜಕೀಯ ಪಕ್ಷಗಳ ಮುಖಂಡರು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಪ್ರಸನ್ನ ಗಣಪತಿ ಭಕ್ತ ಮಂಡಳಿಯ ಪ್ರಮುಖರು ಉಪಸ್ಥಿತರಿದ್ದರು.

**ಸಾಂಸ್ಕೃತಿಕ ಕಾರ್ಯಕ್ರಮಗಳು:** ಪ್ರಸನ್ನ ಗಣಪತಿಯಂತೆ ಪ್ರತಿದಿನ ಇಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹ ಭಕ್ತರ ಅಚ್ಚುಮೆಚ್ಚಿಗೆ ಕಾರಣವಾಗಿದೆ. ಹಾಗಾಗಿ ಪ್ರತಿದಿನ ಸಂಜೆ ರಾಜ್ಯದ ಪ್ರತಿಷ್ಠಿತ ಕಲಾವಿದರು ತಮ್ಮ ಕಲೆಯ ರಸದೌತಣವನ್ನು ಕಲಾ ರಸಿಕರಿಗೆ ಉಣ ಬಡಿಸುವುದರಿಂದ ಸಂಜೆ ಆಯ್ತು ಅಂದರೆ ಪ್ರಸನ್ನ ಗಣಪತಿಯ ಆಸ್ಥಾನ ಮಂಟಪದ ಆವರಣ ಸಾಂಸ್ಕೃತಿಕ ಕಲರವದಿಂದ ರಂಗೇರುತ್ತದೆ.

**ಸಂಪ್ರದಾಯ:** ನಿತ್ಯ ಸೂರ್ಯೋದಯದ ಬಳಿಕ ಭವಾನಿಶಂಕರ ದೇವಾಲಯದಿಂದ ಮಂಗಳವಾದ್ಯ ಸಮೇತ ಗಂಗೆ ತರುವುದು. ಮಧ್ಯಾಹ್ನ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಸಂಪ್ರದಾಯದಂತೆ ನಿತ್ಯವೂ ನಡೆಯಲಿದೆ ಎಂದು ಪ್ರಸನ್ನ ಗಣಪತಿ ಭಕ್ತ ಮಂಡಳಿ ತಿಳಿಸಿದೆ.

## ಲೋಕಕಲ್ಯಾಣಕ್ಕಾಗಿ 21 ದಿನ ಅಷ್ಟಾಕ್ಷರಿ ಜಪ ಯಾಗ

• ಪ್ರಜೋದಯ ವರದಿ

**ಹಾಸನ:** ವಿಶ್ವಕಲ್ಯಾಣ, ಲೋಕಶಾಂತಿ, ಉತ್ತಮ ಮಳೆ-ಬೆಳೆ, ಸಮಾಜದ ಸರ್ವಾಂಗೀಣ ಅಭಿವೃದ್ಧಿಯನ್ನು ಆಶಯವಾಗಿಸಿಕೊಂಡು ಮನೆ ಮನೆ ಗಾಯತ್ರಿ ಹಾಗು ಹಾಸನ ಶ್ರೀ ಗುರು ಸೇವಾ ಪರಿಷತ್ ವತಿಯಿಂದ 21 ದಿನಗಳ ಲಕ್ಷ ಗಾಯತ್ರಿ, ಲಕ್ಷ ವಿಶ್ವಕರ್ಮ ಅಷ್ಟಾಕ್ಷರಿ ಜಪ ಯಾಗವನ್ನು ಆಯೋಜಿಸಲಾಗಿದೆ ಎಂದು ವೇದಬ್ರಹ್ಮ ಪ್ರದೀಪ್ ಶರ್ಮ ಅವರು ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚನ್ನಪಟ್ಟಣದ ಶ್ರೀ ವಿಶ್ವಬ್ರಾಹ್ಮಣ ಸದ್ವಿದ್ಯಾ ಕಾರ್ಯಾಲಯದ ಆವರಣದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ವಿಶ್ವಬ್ರಾಹ್ಮಣ ಸಮುದಾಯದವರು ಕುಟುಂಬ ಸಮೇತರಾಗಿ ತಮ್ಮ ಮನೆಗಳಲ್ಲಿ ಪ್ರತಿ ದಿನ ಸಾಧ್ಯವಾದಷ್ಟು ಗಾಯತ್ರಿ ಮಂತ್ರ ಹಾಗು ವಿಶ್ವಕರ್ಮ ಅಷ್ಟಾಕ್ಷರಿ ಮಂತ್ರವನ್ನು ಜಪಿಸಿ, ಜಪದ ಸಂಖ್ಯೆಯನ್ನು ದಾಖಲಿಸಿಕೊಂಡು ಮಹಾಯಾಗದಲ್ಲಿ ಸಮರ್ಪಿಸುವಂತೆ ಮನವಿ ಮಾಡಿದರು.




ಸನಾತನ ವೈದಿಕ ಪರಂಪರೆಯಲ್ಲಿ ಗಾಯತ್ರಿ ಮಂತ್ರಕ್ಕೆ ಅತ್ಯಂತ ಮಹತ್ವದ ಸ್ಥಾನವಿದ್ದು, ಗಾಯತ್ರಿಯನ್ನು ವೇದಮಾತೆ ಹಾಗೂ ಜಗನ್ಮಾತೆಯ ರೂಪದಲ್ಲಿ ಆರಾಧಿಸಲಾಗುತ್ತದೆ. ಜ್ಞಾನ, ಬುದ್ಧಿ, ತೇಜಸ್ಸು ಹಾಗೂ ಸನ್ಮಾರ್ಗದ ಪ್ರೇರಣೆಯನ್ನು ನೀಡುವ ಮಹಾಮಂತ್ರವಾಗಿ ಗಾಯತ್ರಿ ಮಂತ್ರವನ್ನು ಪರಿಗಣಿಸಲಾಗಿದೆ ಎಂದು ಹೇಳಿದರು.

ಆ.28ರಂದು ಬೆಳಿಗ್ಗೆ 6ರಿಂದ 8ರವರೆಗೆ ಯಜುರ್ ಉಪಾಕರ್ಮ ಆಚರಣೆ ಹಾಗೂ ಜಪ ಸಂಕಲ್ಪ ನಡೆಯಲಿದ್ದು, ಆ.29ರಂದು ಗಾಯತ್ರಿ ಪ್ರತಿಪದೆಯಿಂದ ಜಪ ಕಾರ್ಯಕ್ರಮ ಆರಂಭವಾಗಿದೆ. ಸೆ.16ರಂದು ಸಂಜೆ ಗುರು ಗಣಪತಿ ಪೂಜೆ, ನಾಂದಿ ಹಾಗೂ ನವಗ್ರಹ ಹೋಮ ನಡೆಯಲಿದೆ. ಸೆ.17ರಂದು ಕನ್ಯಾ ಸಂಕ್ರಮಣದ ಶುಭ ಸಂದರ್ಭದಲ್ಲಿ ಮಹಾಯಾಗ ಹಾಗೂ ಜಪ ಸಮರ್ಪಣೆ ನಡೆಯಲಿದ್ದು, ಬೆಳಿಗ್ಗೆ 6 ಗಂಟೆಗೆ ಪ್ರಧಾನ ಆಹುತಿ ಹಾಗೂ 9 ಗಂಟೆಗೆ ಪೂರ್ಣಾಹುತಿ ನೆರವೇರಲಿದೆ ಎಂದು ತಿಳಿಸಿದರು.

ಉತ್ತಮ ಮಳೆ ಹಾಗೂ ಸಮೃದ್ಧ ಬೆಳೆ, ಎಲ್ಲರ ಕೆಲಸ-ಕಾರ್ಯಗಳಲ್ಲಿ ಅಭಿವೃದ್ಧಿ, ಮನೆ ಗಳಲ್ಲಿನ ದೋಷ ನಿವಾರಣೆ, ಆಧ್ಯಾತ್ಮಿಕ ಶಕ್ತಿ, ಸಾತ್ವಿಕ ವಾತಾವರಣ, ರಾಷ್ಟ್ರದ ಸರ್ವಾಂಗೀಣ ಅಭ್ಯುದಯ, ಆರೋಗ್ಯ, ಸುಖ-ಶಾಂತಿ, ಸೌಹಾರ್ದತೆ ಹಾಗೂ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಈ ಧಾರ್ಮಿಕ ಸಂಕಲ್ಪ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕೇಶವ ಪ್ರಸಾದ್, ಪರಮೇಶ್, ಲೋಹಿತ್, ನವೀನ್ ರಾಜ್ ಉಪಸ್ಥಿತರಿದ್ದರು.

### ಭಾರತೀಯರಿಗೂ ರಿಲೀಫ್ | 600 ಸರ್ಕಾರಿ-ಶಾಸಗಿ ಶಿಕ್ಷಣ ಸಂಸ್ಥೆಗಳಿಂದ ಅರ್ಜಿ

# ಟ್ರಂಪ್ ಹೊಸ ವೀಸಾ ನಿಯಮಕ್ಕೆ ಕೋರ್ಟ್ ತಡೆ

• ಪ್ರಜೋದಯ ವರದಿ

**ವಾಷಿಂಗ್ಟನ್:** ವಿದೇಶಿ ವಿದ್ಯಾರ್ಥಿಗಳ ಅಧ್ಯಯನ ಹಾಗೂ ಪತ್ರಕರ್ತರ ಉದ್ಯೋಗಾವಧಿಗೆ ಕಠಿಣ ಮಿತಿ ವಿಧಿಸುವ ಟ್ರಂಪ್ ಆಡಳಿತದ ಹೊಸ ನಿಯಮ ಜಾರಿಗೆ ಅಮೇರಿಕಾದ ಫೆಡರಲ್ ನ್ಯಾಯಾಧೀಶರು ತಾತ್ಕಾಲಿಕ ತಡೆ ನೀಡಿದ್ದಾರೆ.

ಮ್ಯಾಸಚೂಸೆಟ್ಸ್ ಜಿಲ್ಲೆಯ ನ್ಯಾಯಾಧೀಶರು ಸೋಮವಾರ ನೀಡಿರುವ ಈ ಆದೇಶದಿಂದ ಭಾರತ ಸೇರಿ ವಿವಿಧ ದೇಶಗಳ ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಕೊಂಚ ನೆಮ್ಮದಿ ಸಿಕ್ಕಿದೆ. ಹೊಸ ನಿಯಮ ಮಂಗಳವಾರದಿಂದ ಜಾರಿಗೆ ಬರಬೇಕಿತ್ತು. ಅದಕ್ಕೂ ಮುನ್ನವೇ ನ್ಯಾಯಾಲಯ ತಡೆ ನೀಡಿದೆ.

ಹೊಸ ನೀತಿಯಿಂದ ಅಮೇರಿಕಾದ ಆರ್ಥಿಕತೆ ಮತ್ತು ಉನ್ನತ ಶಿಕ್ಷಣ ವ್ಯವಸ್ಥೆಗೆ ಭಾರಿ ಹಾನಿಯಾಗುವ ಸಾಧ್ಯತೆಯಿದೆ ಎಂದು ನ್ಯಾಯಾಧೀಶ ನಾಲ್ಕನೇ ಎಫ್.ಡೆನ್ನಿಸ್ ಸೇಲರ್ ಅಭಿಪ್ರಾಯಪಟ್ಟಿದ್ದಾರೆ. ದೇಶದ ಹಿತಾಸಕ್ತಿ ರಕ್ಷಿಸಲು ಈ ನಿಯಮ ಅಗತ್ಯ ಎಂಬ ಸರ್ಕಾರದ ವಾದವನ್ನೂ ಅವರು ಪುರಸ್ಕರಿಸಲಿಲ್ಲ. ನ್ಯಾಯಾಲಯ ನೀಡಿರುವ ಈ ಆದೇಶವು, ನಿಯಮದ ವಿರುದ್ಧ ಅರ್ಜಿ ಸಲ್ಲಿಸಿದವರಿಗೆ ಮಾತ್ರ ಸೀಮಿತಗೊಳಿಸಬೇಕೆಂಬ ಸರ್ಕಾರದ ವಾದವನ್ನೂ ಸೇಲರ್ ತಿರಸ್ಕರಿಸಿದ್ದಾರೆ.



ಈ ಪ್ರಕರಣವನ್ನು ಪ್ರಶ್ನಿಸಿ ಸುಮಾರು 600 ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಅರ್ಜಿ ಸಲ್ಲಿಸಿವೆ. ಆದರೆ ಅಮೇರಿಕಾದಲ್ಲಿ 5,000ಕ್ಕೂ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳಿವೆ ಎಂದು ನ್ಯಾಯಾಧೀಶರು ಗಮನಿಸಿದ್ದಾರೆ.

ಟ್ರಂಪ್ ಆಡಳಿತ ಜುಲೈನಲ್ಲಿ ಅಂತಿಮಗೊಳಿಸಿದ್ದ ಈ ನಿಯಮದ ಪ್ರಕಾರ, ವಿದ್ಯಾರ್ಥಿಗಳು ಮತ್ತು ವಿನಿಮಯ ಕಾರ್ಯಕ್ರಮದ ಸಂದರ್ಶಕರ ವೀಸಾಗಳ ಅವಧಿಯನ್ನು ನಾಲ್ಕು ವರ್ಷಗಳಿಗೆ ಸೀಮಿತಗೊಳಿಸಲಾಗಿತ್ತು. ಪತ್ರಕರ್ತರ ವೀಸಾಗಳಿಗೆ 240 ದಿನಗಳ ಮಿತಿ ವಿಧಿಸಲಾಗಿತ್ತು. ಚೀನಾದ ಪತ್ರಕರ್ತರಿಗೆ 90 ದಿನಗಳ ವೀಸಾ ಅವಧಿಯನ್ನು ನಿಗದಿಪಡಿಸಲಾಗಿತ್ತು.

ವಿದ್ಯಾರ್ಥಿಗಳು ಮತ್ತು ಪತ್ರಕರ್ತರು ವೀಸಾ ಅವಧಿ ವಿಸ್ತರಣೆಗೆ ಅರ್ಜಿ ಸಲ್ಲಿಸಲು ಅವಕಾಶವಿದ್ದರೂ, ಅದನ್ನು ಅನುಮೋದಿಸುವುದು ಆಂತರಿಕ ಭದ್ರತಾ ಇಲಾಖೆ (ಡಿಎಚ್‌ಎಸ್) ಅಧಿಕಾರಿಗಳ ವಿವೇಚನೆಗೆ ಒಳಪಟ್ಟಿತ್ತು. ವಿಸ್ತರಣೆ ಅರ್ಜಿಯನ್ನು ತಿರಸ್ಕರಿಸಿದರೆ ಅದರ ವಿರುದ್ಧ ಮೇಲ್ಮನವಿ ಸಲ್ಲಿಸಲು ಯಾವುದೇ ಅವಕಾಶವಿರಲಿಲ್ಲ.

ಉನ್ನತ ಶಿಕ್ಷಣ ಕ್ಷೇತ್ರ ಹಾಗೂ ಕಾರ್ಮಿಕ ಸಂಘಟನೆಗಳನ್ನು ಪ್ರತಿನಿಧಿಸುವ ಹಲವು ಸಂಘಟನೆಗಳು ಈ ನಿಯಮವನ್ನು ರದ್ದುಗೊಳಿಸುವಂತೆ ಕೋರಿ ನ್ಯಾಯಾಲಯದ ಮೊರೆ ಹೋಗಿದ್ದವು.

## ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ 66/11 ಕೆ.ವಿ. ಉಗನೆ ವಿ.ವಿ. ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಾಹಣಾ ಕೆಲಸ ಹಮ್ಮಿಕೊಂಡಿರುವುದರಿಂದ ಸೆ.16 ರಂದು ಬೆಳಿಗ್ಗೆ 10 ರಿಂದ ಸಂಜೆ 6ರ ವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಉಗನೆ ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಅನುಗನಾಳು, ದಸೂರು, ಚತುರನ ಹಳ್ಳಿ, ಕಲ್ಲಹಳ್ಳಿ, ಕವಳೀಕೆರೆ ಮತ್ತು ಸುತ್ತಲಿನ ಗ್ರಾಮಗಳ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

## 35.64 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹೊಳೆನರಸೀಪುರ:** ಮನೆಯ ಬೀರು ವಿನಲ್ಲಿದ್ದ 35.64 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗು ನಗದನ್ನು ಕಳವು ಮಾಡಿರುವ ಘಟನೆ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿಯ ಕೆ. ಮುದ್ದನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಎಲೆಚಾಗಹಳ್ಳಿ ಕೆನರಾ ಬ್ಯಾಂಕ್‌ನಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾ ಡುತ್ತಿರುವ ಕೆ. ಮುದ್ದನಹಳ್ಳಿ ಗ್ರಾಮದ ಪುಟ್ಟಸ್ವಾಮಿ ಎಂಬುವವರ ಮನೆ ಯಲ್ಲಿ 35.64 ಲಕ್ಷ ರೂ. ಮೌಲ್ಯದ ಚಿನ್ನದ ಸರ, ನೆಕ್ಲೆಸ್, ಬಳೆ, ಬ್ರೇಸ್‌ಲೆಟ್, ಉಂಗುರ, ಮಾಂಗಲ್ಯ ಸರ, ಕಿವಿಯೋಲೆ ಸೇರಿ 12,800 ರೂ. ನಗದು ಕಳ್ಳತನ ನಡೆದಿದ್ದು, ಈ ಸಂಬಂಧ ಹಳ್ಳಿಮೈಸೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

# ರಾಷ್ಟ್ರೀಯ ಏಕತೆ-ಸಮಗ್ರತೆಯನ್ನು ಗೌರವಿಸಲು ಸಲಹೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಅಖಂಡ ಭಾರತದ ಪರಿಕಲ್ಪನೆ ಹಾಗೂ ರಾಷ್ಟ್ರೀಯ ಏಕತೆಯ ಹಿನ್ನೆಲೆಯಲ್ಲಿ ದೇಶದ ನೆಲದಲ್ಲಿ ಬೇರೆ ದೇಶಗಳ ಧ್ವಜಗಳನ್ನು ಹಾರಿಸುವಂತಹ ಕೃತ್ಯಗಳನ್ನು ಸಾರ್ವಜನಿಕರು ಖಂಡಿಸಬೇಕೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ 19ನೇ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ದೇಶದ ಸಾರ್ವಭೌಮತೆ, ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಯನ್ನು ಪ್ರತಿಯೊಬ್ಬರೂ ಗೌರವಿಸಬೇಕು. ಯಾವುದೇ ಸಂದರ್ಭದಲ್ಲೂ ದೇಶದ ಭಾವನೆಗಳಿಗೆ ಧಕ್ಕೆ ಉಂಟುಮಾಡುವ ರೀತಿಯ ನಡೆಗಳನ್ನು ಪ್ರೋತ್ಸಾಹಿಸಬಾರದು. ಭಾರತದ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ದೇಶದ ಕಾನೂನು, ಸಂವಿಧಾನ ಮತ್ತು ರಾಷ್ಟ್ರೀಯ ಚಿಹ್ನೆಗಳಿಗೆ ಗೌರವ ನೀಡುವ ಮೂಲಕ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಬೇಕು. ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಸಾರ್ವಜನಿಕರು ಜಾಗೃತರಾಗಿ, ಯಾವುದೇ ಪ್ರಚೋದನಾತ್ಮಕ ಚಟುವಟಿಕೆಗಳಿಗೆ ಅವಕಾಶ ನೀಡದೆ ಕಾನೂನುಬದ್ಧವಾಗಿ ನಡೆದುಕೊಳ್ಳಬೇಕು ಎಂದರು.



ಎಸ್‌ಐಆರ್ ಪ್ರಕ್ರಿಯೆಯಡಿ ನೋಟಿಸ್ ಬಂದಿರುವುದಕ್ಕೆ ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ. ನೋಟಿಸ್‌ಗೆ ಸಂಬಂಧಿಸಿದಂತೆ ಅಗತ್ಯವಿರುವ ಸೂಕ್ತ ದಾಖಲೆಗಳನ್ನು ಸಲ್ಲಿಸುವ ಮೂಲಕ ತಮ್ಮ ವಿವರಗಳನ್ನು ಸರಿಪಡಿಸಿಕೊಳ್ಳಬಹುದು. ಮತದಾರರ ಪಟ್ಟಿಯಲ್ಲಿರುವ ಹೆಸರು, ವಿಳಾಸ ಸೇರಿ ವಿವರಗಳಲ್ಲಿ ಯಾವುದೇ ಲೋಪದೋಷಗಳಿದ್ದರೆ, ಸಂಬಂಧಿತ ದಾಖಲೆಗಳನ್ನು ಪರಿಶೀಲನೆಗೆ ನೀಡಬೇಕು. ದಾಖಲೆಗಳ ಆಧಾರದ ಮೇಲೆ ಅರ್ಹತೆ ಮತ್ತು ವಿವರಗಳನ್ನು ಪರಿಶೀಲಿಸಿ ತಿದ್ದುಪಡಿ ಮಾಡಲಾಗುತ್ತದೆ. ನೋಟಿಸ್ ಬಂದಿರುವುದನ್ನು ಮತದಾರರ ಹೆಸರು ಪಟ್ಟಿಯಿಂದ ತೆಗೆದುಹಾಕಲಾಗುತ್ತದೆಂಬುದಾಗಿ ಅರ್ಥೈಸಿಕೊಳ್ಳಬಾರದು. ಪ್ರಕ್ರಿಯೆಯ ಸಂದರ್ಭದಲ್ಲಿ ತಮ್ಮ ಬಳಿ ಲಭ್ಯವಿರುವ ಸೂಕ್ತ ದಾಖಲೆಗಳನ್ನು ನಿಗದಿತ ಅವಧಿಯೊಳಗೆ ಅಧಿಕಾರಿಗಳಿಗೆ ಸಲ್ಲಿಸಿ ಸಹಕರಿಸುವಂತೆ ಮನವಿ ಮಾಡಿದರು.

ಮೊರಾರ್ಜಿ ಅಲ್ಪಸಂಖ್ಯಾತರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ರತ್ನಾಕರ್ ಅವರು ಮಾತನಾಡಿ, ದೇಶದ ಸಂವಿಧಾನವು ಪ್ರತಿಯೊಬ್ಬ ನಾಗರಿಕನ ಹಕ್ಕು, ಸ್ವಾತಂತ್ರ್ಯ, ಸಮಾನತೆ ಹಾಗೂ ಕರ್ತವ್ಯಗಳಿಗೆ ಮಾರ್ಗದರ್ಶನವಾಗಿದೆ. ಸಂವಿಧಾನದ ಆಶಯಗಳನ್ನು ಅರ್ಥೈಸಿ ಕೊಂಡು, ಪ್ರಜಾಪ್ರಭುತ್ವದ ಬಗ್ಗೆ ಪ್ರತಿಯೊಬ್ಬರೂ ಅರಿವು ಮತ್ತು ಜಾಗೃತಿ ಹೊಂದಬೇಕು ಎಂದರು.

ಸಂವಿಧಾನವು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ಬುನಾದಿಯಾಗಿದೆ. ಸಂವಿಧಾನ ನೀಡಿರುವ ಮೂಲಭೂತ ಹಕ್ಕುಗಳ ಜೊತೆಗೆ, ನಾಗರಿಕರು ತಮ್ಮ ಕರ್ತವ್ಯಗಳನ್ನೂ ಅರಿತುಕೊಂಡು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಪ್ರಜಾಪ್ರಭುತ್ವವು ಕೇವಲ ಮತದಾನದ ಹಕ್ಕಿಗೆ ಸೀಮಿತವಾಗಿಲ್ಲ. ಪ್ರತಿಯೊಬ್ಬ ನಾಗರಿಕರೂ ತನ್ನ ಹಕ್ಕುಗಳನ್ನು ಅರಿತುಕೊಳ್ಳುವುದರ ಜೊತೆಗೆ ಕರ್ತವ್ಯಗಳನ್ನು ಪಾಲಿಸುವುದು ಅಗತ್ಯ. ಸಂವಿಧಾನದ ಆಶಯಗಳನ್ನು ಗೌರವಿಸಿ, ಸಾಮಾಜಿಕ ನ್ಯಾಯ ಹಾಗೂ ಸಮಾನತೆಯನ್ನು ಬೆಳೆಸುವ ಮೂಲಕ ಬಲಿಷ್ಠ ಪ್ರಜಾಪ್ರಭುತ್ವ ನಿರ್ಮಿಸಬಹುದೆಂದು ತಿಳಿಸಿದರು.

ಮತದಾನದ ಹಕ್ಕನ್ನು ಸಮರ್ಥವಾಗಿ ಬಳಸಿಕೊಳ್ಳುವುದು, ಕಾನೂನು ಮತ್ತು ಸಂವಿಧಾನವನ್ನು ಗೌರವಿಸುವುದು ಹಾಗೂ ಸಾಮಾಜಿಕ ಸಾಮರಸ್ಯವನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿ. ಯುವಜನರಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳ ಕುರಿತು ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪ್ರತಿಯೊಬ್ಬ ನಾಗರಿಕನ ಜೀವನದಲ್ಲಿ ಅಳವಡಿಸಿಕೊಂಡು ಸಂವಿಧಾನದ ಆಶಯಗಳನ್ನು ಪಾಲಿಸುವುದರೊಂದಿಗೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬಲಪಡಿಸಲು ಎಲ್ಲರೂ ಕೈಜೋಡಿಸಬೇಕೆಂದು ಕರೆ ನೀಡಿ ಸಂವಿಧಾನದ ಪೀಠಿಕೆಯನ್ನು ಸಾಮೂಹಿಕವಾಗಿ ವಾಚಿಸಲಾಯಿತು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಜಿ.ಆರ್.ಹರೀಶ್, ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಅನಿಲ್ ಕುಮಾರ್, ನಗರ ಠಾಣಾ ಪೊಲೀಸ್ ಉಪ ನಿರೀಕ್ಷಕ ಮಲ್ಲಪ್ಪ, ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಆರಂಪುರ ಮಂಜೇಗೌಡ, ಶಿರಸ್ತೇದಾರ್ ಪವನ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಡಿ.ಆರ್.ತ್ಯಾಗರಾಜು, ಕಚೇರಿ ಅಧಿಕ ಮೋಹನ್, ಅಲ್ಪಸಂಖ್ಯಾತರ ಶಿವಕುಮಾರ್, ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಎಂ.ಕೆ.ಮಂಜುನಾಥ್, ಶಿಕ್ಷಕ ಸಂಯೋಜಕ ಲೋಕೇಶ್ ಇತರರು ಭಾಗವಹಿಸಿದ್ದರು.

## ದಾಖಲೆ ಸಮೇತ ಅಕ್ರಮ ಬಯಲು ಮಾಡುವೆ

» **ಮೊದಲನೇ ಪುಟದಿಂದ**

ವಿಚಾರವನ್ನು ಪ್ರಸ್ತಾಪಿಸುತ್ತಿಲ್ಲ. ರಾಜ್ಯದಲ್ಲಿ ಸಂವಿಧಾನದ ಆಶಯಗಳನ್ನು ಎತ್ತಿಹಿಡಿಯುವ ಅಗತ್ಯವಿದೆ. ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗ, ಮಾಧ್ಯಮ ರಂಗ ಎಂಬ 4 ಪ್ರಮುಖ ಅಂಗಗಳಲ್ಲಿ 1ಅಂಗ ಅಲುಗಾಡಿದರೂ ಅದು ಅಂಬೇಡ್ಕರ್ ಅವರು ಬರೆದ ಸಂವಿ ಧಾನಕ್ಕೆ ಮಾಡಿದ ಅವಮಾನವಾಗುತ್ತದೆ ಎಂದರು.

ಯಾರಿಗಾದರೂ ತೊಂದರೆ ನೀಡಬೇಕೆಂಬ ಉದ್ದೇಶದಿಂದ ಹಗರಣಗಳ ವಿಚಾರವನ್ನು ಪ್ರಸ್ತಾಪಿಸುತ್ತಿಲ್ಲ. ನಮ್ಮ ಸಮುದಾಯದವರು ಅಧಿಕಾರಕ್ಕೆ ಬಂದಿದ್ದಾರೆ, ಅಧಿಕಾರ ನಡೆಸಲಿ ಎಂದು ಕೆಲವರು ಹೇಳುತ್ತಾರೆ. ಆದರೆ, ಅಧಿಕಾರದಲ್ಲಿರುವವರು ಜನರಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಅವರಿಗೆ ಸಂಪೂರ್ಣ ಬೆಂಬಲ ನೀಡಲಾಗುವುದು. ಅಧಿಕಾರ ದುರುಪಯೋಗಪಡಿಸಿಕೊಂಡು ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಮಾತನಾಡುವುದರಿಂದ ಹಿಂದೆ ಸರಿಯುವುದಿಲ್ಲ. ಜನರನ್ನು ಬೇರೆ ವಿಚಾರಗಳತ್ತ ತಿರುಗಿಸಿ ಅಕ್ರಮವಾಗಿ ಹಣ ದೋಚುವ ಸಂದರ್ಭದಲ್ಲಿ ಧ್ವನಿ ಎತ್ತಲೇಬೇಕಾಗಿದೆ. ಹಗರಣಗಳ ಬಗ್ಗೆ ಮಾತನಾಡದೆ ಬಾಯಿಮುಚ್ಚಿ ಕೊಂಡು ಕೂರಲು ಸಾಧ್ಯವಿಲ್ಲವೆಂದರು.

## ಪೆಂಡಾಲ್ ಗಣಪತಿ ಪ್ರತಿಷ್ಠಾಪನೆ



• ಪ್ರಜೋದಯ ವರದಿ

**ಹಾಸನ:** ನಗರದ ಸಿಟಿ ಬಸ್ ನಿಲ್ದಾಣದ ಸಮೀಪದ ಪೆಂಡಾಲ್‌ನಲ್ಲಿ ಶ್ರೀ ಗಣಪತಿ ಪ್ರತಿಷ್ಠಾಪನಾ ಮಹೋತ್ಸವ ಸೋಮವಾರ ಭಕ್ತಿ ಹಾಗು ಸಂಭ್ರಮದಿಂದ ನೆರವೇರಿತು.

ಗಣೇಶ ಚತುರ್ಥಿ ಅಂಗವಾಗಿ ಪೆಂಡಾಲ್‌ನಲ್ಲಿ ವಿಶೇಷವಾಗಿ ಅಲಂಕರಿಸಲಾಗಿದ್ದ ಗಣಪತಿ ಮೂರ್ತಿಯನ್ನು ಧಾರ್ಮಿಕ ವಿಧಿವಿಧಾನಗಳೊಂದಿಗೆ ಪ್ರತಿಷ್ಠಾಪಿಸಲಾಯಿತು. ಬಳಿಕ ಗಣಪತಿಗೆ ವಿಶೇಷ ಪೂಜೆ, ಅರ್ಚನೆ ಹಾಗು ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಶಾಸಕ ಹೆಚ್.ಪಿ. ಸ್ವರೂಪ್ ಹಾಗು ಅವರ ಪತ್ನಿ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಗಣಪತಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಗಣಪತಿ ಪೆಂಡಾಲ್‌ಗೆ ಆಗಮಿಸಿದ್ದ ನೂರಾರು ಭಕ್ತರು ದರ್ಶನ ಪಡೆದು, ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ಗಣಪತಿ ಪ್ರತಿಷ್ಠಾಪನೆಯ ಹಿನ್ನಲೆಯಲ್ಲಿ ವಿವಿಧ ಬಗೆಯ ಹೂವು ಹಾಗೂ ಅಲಂಕಾರಿಕ ವಸ್ತುಗಳಿಂದ ಪೆಂಡಾಲ್‌ನ್ನು ಸಿಂಗರಿಸಲಾಗಿತ್ತು. ಬೆಳಿಗ್ಗೆಯಿಂದಲೇ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಗಣಪತಿಯ ದರ್ಶನ ಪಡೆದರು. ಪ್ರತಿ ವರ್ಷ ಗಣೇಶ ಚತುರ್ಥಿ ಸಂದರ್ಭದಲ್ಲಿ ಇಲ್ಲಿ ಗಣಪತಿ ಪ್ರತಿಷ್ಠಾಪನೆ ನಡೆಯುತ್ತಿದ್ದು, ನಗರದ ಭಕ್ತರಿಗೆ ಪೆಂಡಾಲ್ ಗಣಪತಿ ವಿಶೇಷ ಆಕರ್ಷಣೆಯಾಗಿದೆ. ಹಲವು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಈ ಆಚರಣೆಯು ನಗರದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯೊಂದಿಗೆ ಬೆಸೆದುಕೊಂಡಿದೆ.

# ಮಹಿಳಾ ಅಧಿಕಾರಿಗಳ ಗುರಿಯಾಗಿಸಿಕೊಂಡು ಟೀಕೆ

• ಪ್ರಜೋದಯ ವರದಿ

**ಹಾಸನ:** ಆಮ್ ಆದ್ಮಿ ಪಕ್ಷದ ಮುಖಂಡ ಅಗಿಲೆ ಯೋಗೇಶ್ ಅವರು ಮಹಿಳಾ ಅಧಿಕಾರಿಗಳನ್ನು ಗುರಿಯಾಗಿಸಿಕೊಂಡು ಮಾಧ್ಯಮಗಳಲ್ಲಿ ಹೇಳಿಕೆ ನೀಡುತ್ತಿದ್ದಾರೆ. ಅವರ ಹೋರಾಟ ಭ್ರಷ್ಟಾಚಾರದ ವಿರುದ್ಧವೇ ಅಥವಾ ಪ್ರಚಾರಕ್ಕಾಗಿಯೇ ಎಂಬುದನ್ನು ಸ್ಪಷ್ಟಪಡಿಸಬೇಕೆಂದು ಎಎಪಿ ಮುಖಂಡ ಕೆ.ಪಿ.ಶಿವಕುಮಾರ್ ಅವರು ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲ ದಿನಗಳ ಹಿಂದೆ ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಇಂಜಿನೀಯರ್ ಕವಿತಾ ಅವರ ವಿರುದ್ಧ ಅಗಿಲೆ ಯೋಗೇಶ್ ಅವರು ಮಾಧ್ಯಮಗಳಲ್ಲಿ ಹೇಳಿಕೆ ನೀಡಿದ್ದರು. ಇತ್ತೀಚೆಗೆ ಜಿಲ್ಲೆಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ ಅವರ ವಿರುದ್ಧವೂ ಟೀಕಾತ್ಮಕ ಹೇಳಿಕೆ ನೀಡಿದ್ದಾರೆ. ಮಹಿಳಾ ಅಧಿಕಾರಿಗಳನ್ನು ಪದೇಪದೆ ಗುರಿಯಾಗಿಸಿಕೊಂಡು ಮಾತನಾಡುತ್ತಿದ್ದಾರೆಂದು ದೂರಿದರು.




ಅಗಿಲೆ ಯೋಗೇಶ್ ಅವರು ಎಎಪಿಗೆ ಸೇರ್ಪಡೆಯಾದ ಬಳಿಕ ಎಷ್ಟು ಭ್ರಷ್ಟಾಚಾರ ಪ್ರಕರಣಗಳನ್ನು ಬಯಲಿಗೆಳೆದಿದ್ದಾರೆ, ಎಷ್ಟು ಅಕ್ರಮ ಚಟುವಟಿಕೆಗಳ ವಿರುದ್ಧ ದೂರು ನೀಡಿದ್ದಾರೆ ಹಾಗು ಆ ದೂರುಗಳ ಕುರಿತು ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ದಾಖಲೆ ಸಮೇತ ಸಾರ್ವಜನಿಕರ ಮುಂದೆ ಇಡಲಿ. ಹಣ ದ್ವಿಗುಣಗೊಳಿಸುವ ಯೋಜನೆ ನಡೆಸಿ ಬಡ ಹಾಗು ಮಧ್ಯಮ ವರ್ಗದ ಜನರಿಂದ ಹಣ ಸಂಗ್ರಹಿಸಿ ವಂಚಿಸಿದ್ದಾರೆಂಬ ಆರೋಪಗಳು ಈ ಹಿಂದೆ ಕೇಳಿ ಬಂದಿದ್ದವು. ಈ ಆರೋಪಗಳಿಗೆ ಸಂಬಂಧಿಸಿದಂತೆ ಎಷ್ಟು ಮಂದಿ ಹಣ ಹೂಡಿಕೆ ಮಾಡಿದ್ದರು ಹಾಗು ಎಷ್ಟು ಮಂದಿಗೆ ಹಣ ಮರು ಪಾವತಿಸಲಾಗಿದೆ ಎಂಬುದನ್ನು ಅಗಿಲೆ ಯೋಗೇಶ್ ಅವರು ದಾಖಲೆ ಸಮೇತ ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿದರು.

ಭ್ರಷ್ಟಾಚಾರ ಅಥವಾ ಅಕ್ರಮ ಚಟುವಟಿಕೆಗಳ ವಿರುದ್ಧ ನಿಜವಾದ ಹೋರಾಟ ನಡೆಸುವ ಉದ್ದೇಶವಿದ್ದರೆ ಸಂಬಂಧಿಸಿದ ಅಧಿಕಾರಿಗಳನ್ನು ಭೇಟಿ ಮಾಡಿ ದಾಖಲೆಗಳೊಂದಿಗೆ ಚರ್ಚಿಸಬೇಕು. ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬದಲು ಮಾಧ್ಯಮಗಳ ಮುಂದೆ ಹೇಳಿಕೆಗಳನ್ನು ನೀಡುವುದರಿಂದ ಯಾವುದೇ ಪ್ರಯೋಜನವಿಲ್ಲ. ಕಳೆದ ನಾಲ್ಕು ವರ್ಷಗಳಿಂದ ತಮ್ಮನ್ನು ರಾಜ್ಯ ಹಾಗು ರಾಷ್ಟ್ರಮಟ್ಟದ ನಾಯಕ ಎಂದು ಬಿಂಬಿಸಿಕೊಳ್ಳುತ್ತಿರುವ ಅಗಿಲೆ ಯೋಗೇಶ್ ಅವರು, ಪಕ್ಷದ ಸಂಘಟನೆಯನ್ನು ತಾಲ್ಲೂಕು ಅಥವಾ ವಾರ್ಡ್ ಮಟ್ಟದಲ್ಲಿ ಬಲಪಡಿಸಲು ಎಷ್ಟು ಕೆಲಸ ಮಾಡಿದ್ದಾರೆ ಎಂಬುದನ್ನೂ ಬಹಿರಂಗಪಡಿಸಬೇಕೆಂದರು. ಪಕ್ಷದ ಮುಖಂಡರಾದ ರವಿಕುಮಾರ್, ಪ್ರೇಮಕುಮಾರ್, ಶ್ರೀನಿವಾಸ್ ಉಪಸ್ಥಿತರಿದ್ದರು.

# ಪ್ರಜಾಪ್ರಭುತ್ವ ಸದೃಢತೆಗೆ ಮತದಾನದ ಅರಿವು ಮುಖ್ಯ

## ಶಾಸಕ ಸಿಮೆಂಟ್ ಮಂಜು ಅಭಿಮತ

• ಪ್ರಜೋದಯ ವರದಿ

**ಸಕಲೇಶಪುರ:** ಭಾರತದ ಸಂವಿಧಾನ ವಿಶ್ವದ ಶ್ರೇಷ್ಠ ಸಂವಿಧಾನಗಳಲ್ಲಿ ಒಂದಾಗಿದ್ದು, ಪ್ರಜಾಪ್ರಭುತ್ವ ದಿನಾಚರಣೆ ನಡೆಸುವುದಷ್ಟೇ ಸಾಲದು. ಪ್ರಜಾಪ್ರಭುತ್ವ ವ್ಯವಸ್ಥೆ ಸದೃಢವಾಗಿ ಉಳಿಯಬೇಕಾದರೆ ಮತದಾನದ ಸಂದರ್ಭದಲ್ಲಿ ಯಾರನ್ನು ಆಯ್ಕೆ ಮಾಡಬೇಕೆಂಬ ಕುರಿತು ಪ್ರತಿಯೊಬ್ಬರಲ್ಲೂ ಜಾಗೃತಿ ಮೂಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಕರ್ನಾಟಕ ಸರ್ಕಾರ ಹಾಗು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಂಗಳವಾರ ಆಯೋಜಿಸಿದ್ದ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಮಾತನಾಡಿದ ಅವರು, ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಸೇರಿ ಸಂವಿಧಾನ ರಚನಾ ಸಭೆಯ ಮಹನೀಯರು ನಮಗೆ ನೀಡಿರುವ ಶ್ರೇಷ್ಠ ಸಂವಿಧಾನದ ಅಡಿಯಲ್ಲಿ ಬದುಕುತ್ತಿರುವುದು ಹೆಮ್ಮೆಯ ಸಂಗತಿ ಎಂದರು.



ಜನರಿಂದ, ಜನರಿಗಾಗಿ ಮತ್ತು ಜನರ ಮೂಲಕ ನಡೆಯುವ ಆಡಳಿತ ವ್ಯವಸ್ಥೆಯೇ ಪ್ರಜಾಪ್ರಭುತ್ವ. ದೇಶದ ಆಡಳಿತ ನಡೆಸುವ ನಾಯಕರನ್ನು ಮತದಾನದ ಮೂಲಕ ಆಯ್ಕೆ ಮಾಡುವ ಹಕ್ಕನ್ನು ಸಂವಿಧಾನ ಪ್ರತಿಯೊಬ್ಬ ಪ್ರಜೆಗೂ ನೀಡಿದೆ. ಈ ಹಕ್ಕಿನ ಮಹತ್ವವನ್ನು ಅರಿತು ಮತದಾರರು ಜವಾಬ್ದಾರಿಯಿಂದ ಮತ ಚಲಾಯಿಸುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಬೇಕೆಂದು ತಿಳಿಸಿದರು.

ಕೆಲವು ದೇಶಗಳಲ್ಲಿ ರಾಜಮನೆತನದ ಮೂಲಕ ವಂಶಪಾರಂಪರ್ಯವಾಗಿ ಅಧಿಕಾರ ಹಸ್ತಾಂತರವಾಗುತ್ತದೆ. ಆದರೆ ಭಾರತದಲ್ಲಿ ಪ್ರತಿಯೊಬ್ಬ ಪ್ರಜೆಗೂ ತಮಗೆ ಸೂಕ್ತವೆನಿಸುವ ಅಭ್ಯರ್ಥಿಯನ್ನು ಆಯ್ಕೆ ಮಾಡುವ ಅವಕಾಶವಿದೆ. ದೇಶದ ಕಟ್ಟಕಡೆಯ ಪ್ರಜೆಗೂ ತನ್ನ ನಾಯಕನನ್ನು ಆಯ್ಕೆ ಮಾಡುವ ಹಕ್ಕು ದೊರೆತಿರುವುದು ಭಾರತೀಯ ಪ್ರಜಾಪ್ರಭುತ್ವದ ವಿಶೇಷತೆ ಎಂದು ಹೇಳಿದರು.

ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಗ್ಗಳಿಕೆ ಭಾರತಕ್ಕಿದೆ. ಇದಕ್ಕೆ ಭದ್ರವಾದ ಅಡಿಪಾಯ ಹಾಕಿರುವುದು ಸಂವಿಧಾನ. ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ಭ್ರಾತೃತ್ವದ ಮೌಲ್ಯಗಳನ್ನು ಸಂವಿಧಾನ ಪ್ರತಿಪಾದಿಸಿದ್ದು, ಜಾತಿ, ಧರ್ಮ, ಬಡವ ಶ್ರೀಮಂತ ಎಂಬ ಯಾವುದೇ ಭೇದವಿಲ್ಲದೆ ಎಲ್ಲರಿಗೂ ಸಮಾನ ಹಕ್ಕು ಹಾಗೂ ಸಾಮಾಜಿಕ ನ್ಯಾಯ ದೊರೆಯಬೇಕೆಂಬ ಆಶಯವನ್ನು ಹೊಂದಿದೆ ಎಂದರು.

ಮತದಾನದ ಸಂದರ್ಭದಲ್ಲಿ ಪ್ರತಿಯೊಬ್ಬರ ಮತಕ್ಕೂ ಒಂದೇ ಮೌಲ್ಯ ಇರುವುದು ಪ್ರಜಾಪ್ರಭುತ್ವದ ನಿಜವಾದ ಶಕ್ತಿ. ಜನಪ್ರತಿನಿಧಿಗಳು ಅಧಿಕಾರದಲ್ಲಿರುವವರು ಎಂಬ ಭಾವನೆಗಿಂತ, ಜನರು ನೀಡಿರುವ ಜವಾಬ್ದಾರಿಯನ್ನು ನಿರ್ವಹಿಸುವ ಸೇವಕರು ಎಂಬ ಮನೋಭಾವ ಹೊಂದಬೇಕು. ಜನರ ವಿಶ್ವಾಸಕ್ಕೆ ತಕ್ಕಂತೆ ಕಾರ್ಯನಿರ್ವಹಿಸುವುದು ಜನಪ್ರತಿನಿಧಿಗಳ ಕರ್ತವ್ಯವಾಗಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ತಾಲ್ಲೂಕು ಕಚೇರಿ ಮುಂಭಾಗದಲ್ಲಿರುವ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಬಳಿಕ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಬ್ಯಾಕರವಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಶತೇಂದ್ರ ಕುಮಾರ್ ಮಾತನಾಡಿ, ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಸಂವಿಧಾನದ ಪ್ರಮುಖ ಮೌಲ್ಯಗಳಾಗಿವೆ. ಅವುಗಳನ್ನು ಗೌರವಿಸಿ ಪಾಲಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಸಂವಿಧಾನವು ಪ್ರತಿಯೊಬ್ಬರ ಹಕ್ಕು, ಸ್ವಾತಂತ್ರ್ಯ ಹಾಗೂ ಸಮಾನತೆಯನ್ನು ರಕ್ಷಿಸುವುದರ ಜತೆಗೆ ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸುವ ಆಶಯ ಹೊಂದಿದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಿ ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ಪ್ರತಿಯೊಬ್ಬ ನಾಗರಿಕನ ಮೇಲಿದೆ ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್ ಸಂವಿಧಾನದ ಪೀಠಿಕೆಯನ್ನು ಬೋಧಿಸಿದರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಂಗಾಧರ್, ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಏಷ್ಯನ್ ಕ್ರೀಡಾಕೂಟಕ್ಕೆ ಭಾರತ ತಂಡ: 702 ಕೋ.ರೂ. ವೆಚ್ಚ

**ನವದೆಹಲಿ:** ಜಪಾನ್ ದೇಶದ ಐಚಿ ನಗೋಯಾದಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾ ಕೂಟದಲ್ಲಿ ಭಾಗವಹಿಸುವ ಭಾರತ ತಂಡದ ಸಿದ್ಧತೆಗಾಗಿ 702 ಕೋಟಿ ಖರ್ಚು ಮಾಡಿರುವುದಾಗಿ ಕೇಂದ್ರ ಕ್ರೀಡಾ ಸಚಿವಾಲಯ ತಿಳಿಸಿದೆ.

ಸೆ.19ರಿಂದ ಕೂಟವು ಆರಂಭವಾಗಲಿದೆ. ಭಾರತ ತಂಡದಲ್ಲಿ 310 ಮಂದಿ ಇದೇ ಮೊದಲ ಬಾರಿಗೆ ಕೂಟದಲ್ಲಿ ಆಡಲಿದ್ದಾರೆ. ಹೋದ ವರ್ಷದ 106 ಪದಕಗಳ ದಾಖಲೆಯನ್ನು ಮೀರಿ ನಿಲ್ಲುವ ವಿಶ್ವಾಸವಿದೆ ಎಂದು ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಯೋಜನೆ (ಟಾಪ್ಸ್) ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್.ಎಸ್.ಜೋಹಲ್ ಹೇಳಿದ್ದಾರೆ.

ಟಾಪ್ಸ್ ಸಿಇಒ ಆಗಿರುವುದು ನನಗೆ ಹೆಮ್ಮೆಯ ವಿಷಯವಾಗಿದೆ. ತಂಡದಲ್ಲಿ ಎಲ್ಲರೂ ಅಪಾರ ಆತ್ಮವಿಶ್ವಾಸದಿಂದ ಇದ್ದಾರೆ. ಯುವ ಅಥ್ಲೀಟ್‌ಗಳು ಉನ್ನತ ಸಾಧನೆ ಮಾಡುವ ಭರವಸೆ ಇದೆ ಎಂದು ಹೇಳಿದರು.

## ಸೆ.19 ರಂದು ಮುಂದಿನ ಅಧ್ಯಾಯ ವೆಬ್‌ಸೀರಿಸ್ ಬಿಡುಗಡೆ

• ಪ್ರಜೋದಯ ವರದಿ

**ಹಾಸನ:** ಹಿರಿಯ ನಿರ್ದೇಶಕ ಟಿ.ಎನ್. ಸೀತಾರಾಂ ಅವರ ಬಹು ನಿರೀಕ್ಷಿತ ಮುಂದಿನ ಅಧ್ಯಾಯ ವೆಬ್‌ಸೀರಿಸ್ ಸೆ.19 ರಂದು ಪ್ರೇಕ್ಷಕರ ಎದುರು ಬರಲು ಸಜ್ಜಾಗಿದೆ ಎಂದು ಪತ್ರಕರ್ತ ಮಂಜು ಬನವಾಸೆ ಅವರು ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೆಬ್ ಸೀರಿಸ್ ಭೂಮಿಕಾ ಟಾಕೀಸ್ ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರಸಾರ ಆಗಲಿದೆ. ದಶಕಗಳ ಕಾಲ ಕನ್ನಡ ಕಿರುತೆರೆಯಲ್ಲಿ ಮಾಯಾಮೃಗ, ಮುಕ್ತ, ಮಗಳು ಜಾನಕಿ ಮೂಲಕ ಮೋಡಿ ಮಾಡಿದ್ದ ಟಿಎನ್‌ಎಸ್ ಅವರ ಈ ಹೊಸ ಪ್ರಯತ್ನವನ್ನು ವೀಕ್ಷಕರು ಭೂಮಿಕಾ ಟಾಕೀಸ್ ಯೂಟ್ಯೂಬ್ ಚಾನೆಲ್‌ನಲ್ಲಿ ವೀಕ್ಷಿಸಬಹುದಾಗಿದೆ. ಟಿವಿ ಧಾರಾವಾಹಿಗಳ ಮಿತಿಯಿಂದ ಹೊರಬಂದು, ಹೆಚ್ಚು ಮುಕ್ತವಾಗಿ ಮತ್ತು ವೇಗವಾಗಿ ಕಥೆ ಹೇಳಲು ಅವರು ಈಗ ವೆಬ್ ಸೀರಿಸ್ ಹಾಗು ಯೂಟ್ಯೂಬ್ ವೇದಿಕೆ ಆಯ್ದುಕೊಂಡಿದ್ದಾರೆ ಎಂದರು.

ನಗರದಲ್ಲಿ ಮೊದಲ ಎಪಿಸೋಡ್ ಬಿಡುಗಡೆ ಕಾರ್ಯಕ್ರಮ ಈ ವಿಶಿಷ್ಟ ವೆಬ್ ಸೀರಿಸ್‌ನ ಮೊದಲ ಸಂಚಿಕೆಯ ಬಿಡುಗಡೆ ಹಾಗು ಅನಾವರಣ ಕಾರ್ಯಕ್ರಮ ಆಯೋಜಿಸಲಾಗಿದೆ.



ಸೆ.19 ರಂದು ಸಂಜೆ 5.30ಕ್ಕೆ ನಗರದ ಎಂ.ಜಿ. ರಸ್ತೆಯ ಗಾಂಧಿ ಭವನದಲ್ಲಿ ಕಾರ್ಯಕ್ರಮ ನಡೆಯಲಿದೆ. ಸ್ಥಳೀಯ ವೀಕ್ಷಕರು ಹಾಗು ಟಿಎನ್‌ಎಸ್ ಅಭಿಮಾನಿಗಳಿಗೆ ಮುಖಾಮುಖಿಯಾಗಿ ಈ ಹೊಸ ಡಿಜಿಟಲ್ ಪಯಣಕ್ಕೆ ಮುನ್ನುಡಿ ಬರೆಯಲು ಚಿತ್ರತಂಡ ಸಿದ್ಧತೆ ನಡೆಸಿದೆ ಎಂದರು.

ಇದು 16 ಎಪಿಸೋಡ್‌ಗಳ ವೆಬ್‌ಸರಣಿ, ಟಿ.ಎನ್.ಎಸ್ ಅವರ ಹಿಂದಿನ ಧಾರಾವಾಹಿಗಳ ಜನಪ್ರಿಯ ಪಾತ್ರಗಳ ಇಂದಿನ ಸ್ಥಿತಿ ಏನಾಗಿರಬಹುದೆನ್ನುವ ಕಥಾ ಕಲ್ಪನೆಯ ಆಧಾರದ ಮೇಲೆ ಕುತೂಹಲಕಾರಿಯಾದ ವೆಬ್ ಸರಣಿ ಸಿದ್ಧಪಡಿಸಲಾಗಿದೆ. ಒಟ್ಟು 16 ಎಪಿಸೋಡ್‌ಗಳಿದ್ದು, ನಿಯಮಿತವಾಗಿ ಬಿಡುಗಡೆ ಆಗಲಿದೆ. ಮೊದಲ ಸರಣಿಯಲ್ಲಿ ಮಗಳು ಜಾನಕಿಯ ಕಥೆಯನ್ನು ಆಯ್ದುಕೊಳ್ಳಲಾಗಿದೆ ಎಂದು ತಿಳಿಸಿದರು. ಪತ್ರಕರ್ತ ಹೆತ್ತೂರು ನಾಗರಾಜು, ಚಂದ್ರಶೇಖರ್, ಸುಧೀರ್ ಇದ್ದರು.

## ಯುವ ಪೀಳಿಗೆ ಪ್ರಜಾಪ್ರಭುತ್ವದ ಮೌಲ್ಯ ಅರಿಯಲಿ

» **ಮೊದಲನೇ ಪುಟದಿಂದ**

ಪಡಿಸುವ ನಿಟ್ಟಿನಲ್ಲಿ ಸಾರ್ವಜನಿಕರು, ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಯುವಜನತೆ ಒಗ್ಗೂಡಿ ಕಾರ್ಯನಿರ್ವಹಿಸಬೇಕೆಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಅವರು ಮಾತನಾಡಿ, ಪ್ರಜಾಪ್ರಭುತ್ವವು ಕೇವಲ ಆಡಳಿತ ವ್ಯವಸ್ಥೆಯಲ್ಲ. ಅದು ಕೋಟ್ಯಾಂತರ ಜನರ ಕನಸು, ಆಶಯ ಹಾಗೂ ಹಕ್ಕುಗಳನ್ನು ಒಳಗೊಂಡಿರುವ ವ್ಯವಸ್ಥೆಯಾಗಿದೆ. ಪ್ರಜಾಪ್ರಭುತ್ವದ ಮೂಲಕ ಪ್ರತಿಯೊಬ್ಬ ನಾಗರಿಕನಿಗೂ ಅಭಿವೃದ್ಧಿಯ ಅವಕಾಶ, ಸಮಾನತೆ ಹಾಗೂ ಗೌರವ ದೊರೆಯಬೇಕೆಂದು ಹೇಳಿದರು.

ಪ್ರಜಾಪ್ರಭುತ್ವದ ಆಶಯಗಳು ಮತ್ತು ಮೌಲ್ಯಗಳ ಕುರಿತು ಜನರಿಗೆ ಸರಳವಾಗಿ ಹಾಗೂ ಸಮಗ್ರವಾಗಿ ಮಾಹಿತಿ ನೀಡುವ ಅಗತ್ಯವಿದೆ. ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿವರ್ಷ ಸೆ.15ರಂದು ದೇಶದ ವಿವಿಧೆಡೆ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನು ಆಚರಿಸಲಾಗುತ್ತಿದೆ ಎಂದರು.

ಪ್ರಜಾಪ್ರಭುತ್ವವು ಕೇವಲ ರಾಜಕೀಯ ಅಥವಾ ಆಡಳಿತ ವ್ಯವಸ್ಥೆಯಲ್ಲ. ಅದು ಜನರ ಆಶಯಗಳು, ಹಕ್ಕುಗಳು ಹಾಗೂ ಗೌರವವನ್ನು ಒಳಗೊಂಡಿರುವ ಜೀವನ ವ್ಯವಸ್ಥೆಯಾಗಿದೆ. ಸಂವಿಧಾನದ ಆಶಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಮೂಲಕ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸಬೇಕೆಂದು ತಿಳಿಸಿದರು. ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ದೂದ್ ಫೀರ್, ಅಧಿಕಾರಿಗಳು, ಸಿಬ್ಬಂದಿ ಇದ್ದರು.

## ಸಮಾನ ಅವಕಾಶ ದೊರೆತಾಗ ಮಾತ್ರ ಪ್ರಜಾಪ್ರಭುತ್ವಕ್ಕೆ ಅರ್ಥ

» **ಮೊದಲನೇ ಪುಟದಿಂದ**

ಬರುತ್ತದೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯಗಳನ್ನು ಯುವಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ ಯುವ ಸಂಸತ್ ಸಭೆಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಯುವಜನರು ದೇಶದ ಭವಿಷ್ಯದ ಪ್ರಜೆಗಳಾಗಿದ್ದು, ಪ್ರಜಾಪ್ರಭುತ್ವದ ಆಶಯಗಳನ್ನು ಅರಿತು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂದು ತಿಳಿಸಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾತನಾಡಿ, ದೇಶ ಹೇಗಿರಬೇಕು, ಯಾವ ರೀತಿಯಲ್ಲಿ ಆಡಳಿತ ನಡೆಯಬೇಕು ಹಾಗೂ ಪ್ರಜೆಗಳ ಹಕ್ಕುಗಳು ಮತ್ತು ಕರ್ತವ್ಯಗಳೇನೆಂಬುದನ್ನು ಸಂವಿಧಾನದ ಮೂಲಕ ತಿಳಿದುಕೊಳ್ಳಬಹುದು. ಸಾಮಾಜಿಕ, ಆರ್ಥಿಕ ಹಾಗು ರಾಜಕೀಯವಾಗಿ ಎಲ್ಲರಿಗೂ ಸಮಾನ ಅವಕಾಶ ದೊರೆಯಬೇಕೆಂಬ ಆಶಯವನ್ನು ಸಂವಿಧಾನ ಹೊಂದಿದೆ. ನಾವು ಅನುಸರಿಸುತ್ತಿರುವ ಆಡಳಿತಾತ್ಮಕ ವ್ಯವಸ್ಥೆಯ ಬಗ್ಗೆ ಗೌರವ ಬೆಳೆಸಿಕೊಳ್ಳಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಸಂವಿಧಾನದ ಪೀಠಿಕೆಯನ್ನು ಓದುವುದರಿಂದ ಉತ್ತಮ ಅರಿವು ಮೂಡುತ್ತದೆ ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂ ಶುಕ್ಲಾ ಅವರು ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಮುಖ ಕೇಂದ್ರ ಬಿಂದು ನಾಗರಿಕರು. ಆಡಳಿತ ನಡೆಸುವವರನ್ನು ಆಯ್ಕೆ ಮಾಡುವ ಅಧಿಕಾರ ಪ್ರಜೆಗಳಿಗಿದೆ. ಅಧಿಕಾರಿಗಳ ಮೊದಲ ಆದ್ಯತೆ ಜನರ ಸಮಸ್ಯೆಗಳನ್ನು ಪರಿಹರಿಸುವುದಾಗಿರಬೇಕು. ಶಿಕ್ಷಣ ಪ್ರತಿಯೊಬ್ಬರ ಹಕ್ಕು ಮಾತ್ರವಲ್ಲ, ಜವಾಬ್ದಾರಿಯೂ ಆಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ಅರಿವು ಮೂಡಿಸಿಕೊಳ್ಳಲು ಉತ್ತಮ ಶಿಕ್ಷಣ ಪಡೆಯಬೇಕು. ಪ್ರಜಾಪ್ರಭುತ್ವದ ಆಶಯಗಳನ್ನು ಸರಳವಾಗಿ ಅರ್ಥಮಾಡಿ ಕೊಳ್ಳಬೇಕಾದರೆ ಸಂವಿಧಾನವನ್ನು ಓದಬೇಕೆಂದು ತಿಳಿಸಿದರು.

ಸರ್ಕಾರಿ ಕಲಾ ಮತ್ತು ವಾಣಿಜ್ಯ ಸ್ನಾತಕೋತ್ತರ ಸ್ವಾಯತ್ತ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಎಂ. ಮಹೇಶ್ ಅವರು ಉಪನ್ಯಾಸ ನೀಡಿ, ಪ್ರಜಾಪ್ರಭುತ್ವ ಕೇವಲ ಆಡಳಿತ ವ್ಯವಸ್ಥೆಯಲ್ಲ. ಅದು ನಮ್ಮ ಜೀವನ ಶೈಲಿಯೂ ಆಗಿದೆ. ಹಕ್ಕುಗಳ ಜತೆಗೆ ಕರ್ತವ್ಯಗಳನ್ನು ಪಾಲಿಸುವುದು, ಸಮಾಜದಲ್ಲಿ ಶಾಂತಿ, ಸಮಾನತೆ ಹಾಗೂ ಸಹಬಾಳ್ವೆಯನ್ನು ಬೆಳೆಸುವುದು ಪ್ರಜಾಪ್ರಭುತ್ವದ ಮೂಲ ಆಶಯವಾಗಿದೆ ಎಂದು ಹೇಳಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ಸ್ವಾತಂತ್ರ್ಯ ಮತ್ತು ಸಮಾನತೆ ದೊರೆಯಬೇಕು. ಯುವಜನರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ದೇಶದ ಬಗ್ಗೆ ಕಾಳಜಿ ವಹಿಸುವುದು, ಸಮಾಜದಲ್ಲಿ ನಡೆಯುವ ತಪ್ಪುಗಳನ್ನು ಪ್ರಶ್ನಿಸುವುದು ಕೂಡ ಪ್ರಜಾಪ್ರಭುತ್ವದ ಭಾಗವಾಗಿದೆ ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ದೂದ್ ಫೀರ್, ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

## ಕಾಂಗ್ರೆಸ್ ಇಂದಿಗೂ ಒಡೆದು ಆಳುವ ನೀತಿಯನ್ನೇ ಪಾಲಿಸುತ್ತಿದೆ: ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ



• ಪ್ರಜೋದಯ ವರದಿ

**ಬೆಂಗಳೂರು:** ಕಾಂಗ್ರೆಸ್ ಪಕ್ಷ ಇಂದಿಗೂ ಒಡೆದು ಆಳುವ ನೀತಿಯನ್ನೇ ಪಾಲಿಸುತ್ತಿದೆ. ಓಲೈಕೆ ರಾಜಕಾರಣ ಮಾಡುತ್ತಿದೆಂದು ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರು ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಭ್ರಷ್ಟಾಚಾರದಲ್ಲೇ ಕಾಂಗ್ರೆಸ್ ಮುಳುಗಿದೆ. ಬಡವರು, ಯುವಕರು, ಅನ್ನದಾತರು ಮತ್ತು ನಾರೀಶಕ್ತಿಯ (ಗ್ಯಾನ್) ಸಬಲೀ ಕರಣಕ್ಕೆ ಬಿಜೆಪಿ ಶ್ರಮಿಸುತ್ತಿದೆ. ಸೇವಾ ಸುಶಾಶನ ಮತ್ತು ಗರೀಬ್ ಕಲ್ಯಾಣ ಎಂಬುದು ಕೇಂದ್ರ ಸರ್ಕಾರದ ಮಂತ್ರವಾಗಿದೆ ಎಂದರು.

ಮೋದಿ ಅವರ 25 ವರ್ಷಗಳ ಸಾರ್ವಜನಿಕ ಸೇವೆಯನ್ನು ಸ್ಮರಿಸಲು ವಡ್‌ನಗರದಿಂದ ವಾರಾಣಸಿವರೆಗೆ ಸೇವಾ ಯಾತ್ರೆ ಹಮ್ಮಿಕೊಳ್ಳಲಾಗಿದೆ. ವಡ್‌ನಗರ ಮೋದಿ ಅವರ ಜನ್ಮಸ್ಥಳ. ವಾರಾಣಸಿ ಅವರ ಕ್ಷೇತ್ರ. ಎರಡು ಯಾತ್ರೆಗಳು ಇಲ್ಲಿ ನಡೆಯಲಿವೆ. ಯಾತ್ರೆಯ ವೇಳೆ ಸರ್ಕಾರದ ಸೌಲಭ್ಯಗಳು ಕೊನೆಯ ಫಲಾನುಭವಿಗೂ ತಲುಪಿರುವ ಬಗ್ಗೆ ಮಾಹಿತಿ ಪಡೆಯಲಾಗುವುದು. ಕೇಂದ್ರ ಸರ್ಕಾರದ ಜನಕಲ್ಯಾಣ ಯೋಜನೆಗಳನ್ನು ಪ್ರತಿ ಫಲಾನುಭವಿಗಳಿಗೂ ತಲುಪುವಂತೆ ಬಿಜೆಪಿಯ ಸ್ಥಳೀಯ ಮುಖಂಡರು, ಕಾರ್ಯಕರ್ತರು ಶ್ರಮಿಸಬೇಕೆಂದು ಸಲಹೆ ನೀಡಿದರು.

ಭಾರತವು ಹಿಂದಿನ ಆಡಳಿತದಲ್ಲಿ ಐದು ದುರ್ಬಲ ರಾಷ್ಟ್ರಗಳ ಸಾಲಿನಲ್ಲಿತ್ತು. 12 ವರ್ಷಗಳಲ್ಲಿ ವಿಶ್ವದ ಐದು ಪ್ರಮುಖ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿ ಮುನ್ನಡೆಯುತ್ತಿದೆ. 25 ಕೋಟಿ ಜನರು ಕಡು ಬಡತನ ರೇಖೆಯಿಂದ (ಬಿಪಿಎಲ್) ಮೇಲೆ ಬಂದಿದ್ದಾರೆ. ಗರೀಬ್ ಕಲ್ಯಾಣ್ ಅಡಿ ಅರ್ಹರಿಗೆ ಪಡಿತರ ಕೊಡಲಾಗುತ್ತಿದೆ. ರಾಷ್ಟ್ರೀಯ ಹೆದ್ದಾರಿ 1.46 ಲಕ್ಷ ಕಿ.ಮೀಗೆ ಏರಿಕೆಯಾಗಿದೆ. ಪಾಕಿಸ್ತಾನಕ್ಕೆ ಅದರದೇ ಭಾಷೆಯಲ್ಲಿ ಉತ್ತರ ಕೊಡಲಾಗಿದೆಂದು ಹೇಳಿದರು.

**ನಿಷ್ಪಕ್ಷಪಾತ ತನಿಖೆಗಾಗಿ ಸಿಐಡಿಗೆ ವಹಿಸಲು ಡಿ.ಸಿ.ಸಣ್ಣಸ್ವಾಮಿ ಒತ್ತಾಯ**

# ಸಕಲೇಶಪುರದಲ್ಲಿ ಹೆಚ್ಚುತ್ತಿದೆ ಅಕ್ರಮ ಚಟುವಟಿಕೆ

• ಪ್ರಜೋದಯ ವರದಿ



**ಹಾಸನ:** ಸಕಲೇಶಪುರ ತಾಲ್ಲೂಕಿನಲ್ಲಿ ಗಾಂಜಾ, ಮಾದಕ ವಸ್ತುಗಳ ಮಾರಾಟ, ಇಸ್ಪೀಟ್, ಮಟ್ಕಾ ದಂತಹ ಅಕ್ರಮ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಈ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ಅಗತ್ಯವಿದ್ದರೆ ಪ್ರಕರಣವನ್ನು ಸಿಐಡಿಗೆ ವಹಿಸಬೇಕೆಂದು ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಡಿ.ಸಿ.ಸಣ್ಣಸ್ವಾಮಿ ಅವರು ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಗಾಂಜಾ ಸೇರಿ ಮಾದಕ ವಸ್ತುಗಳು ಸುಲಭವಾಗಿ ಲಭ್ಯವಾಗುತ್ತಿವೆ ಎಂಬ ದೂರುಗಳು ಸಾರ್ವಜನಿಕರಿಂದ ಕೇಳಿಬರುತ್ತಿವೆ. ಇದರಿಂದ ಯುವಕರು ಹಾಗು ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಪೋಷಕರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಮಾದಕ ವಸ್ತುಗಳ ಜಾಲವನ್ನು ಪತ್ತೆ ಹಚ್ಚಿ ಕಡಿವಾಣ ಹಾಕುವ ನಿಟ್ಟಿನಲ್ಲಿ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಬೇಕೆಂದು ಆಗ್ರಹಿಸಿದರು.

ಇಸ್ಪೀಟ್, ಮಟ್ಕಾ ಸೇರಿ ವಿವಿಧ ಅಕ್ರಮ ಚಟುವಟಿಕೆಗಳು ಕೂಡ ನಿರಾತಂಕವಾಗಿ ನಡೆಯುತ್ತಿವೆ. ಇಂತಹ ಚಟುವಟಿಕೆಗಳಿಂದ ವಿಶೇಷವಾಗಿ ಕಾಲೇಜು ವಿದ್ಯಾರ್ಥಿಗಳು ದಾರಿ ತಪ್ಪುವ ಅಪಾಯವಿದ್ದು, ತಾಲ್ಲೂಕಿನಲ್ಲಿ ಕಾನೂನು ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ. ಕಳೆದ ಮೂರು ವರ್ಷಗಳಿಂದ ತಾಲ್ಲೂಕಿನಲ್ಲಿ ಅಕ್ರಮ ಚಟುವಟಿಕೆಗಳು ಹೆಚ್ಚಾಗಿದ್ದು, ಇದರ ಹಿಂದೆ ರಾಜಕೀಯ ಪ್ರಭಾವವಿದೆ ಎಂದು ದೂರಿದರು.

ಕೆಲವು ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಿದ ಬಳಿಕ ರಾಜಕೀಯ ಒತ್ತಡದಿಂದ ಬಿಡುಗಡೆ ಮಾಡಲಾಗುತ್ತಿದೆ ಎಂಬ ಆರೋಪಗಳೂ ಕೇಳಿ ಬರುತ್ತಿವೆ. ಇಂತಹ ಆರೋಪಗಳ ಸತ್ಯಾಸತ್ಯತೆ ಕುರಿತು ಉನ್ನತ ಮಟ್ಟದ ತನಿಖೆ ನಡೆಸಿ, ಯಾವುದೇ ರಾಜಕೀಯ ವ್ಯಕ್ತಿ ಅಥವಾ ಪ್ರಭಾವಿ ವ್ಯಕ್ತಿಯ ಹಸ್ತಕ್ಷೇಪವಿದ್ದರೆ ಅದನ್ನು ಬಹಿರಂಗಪಡಿಸಬೇಕು. ಇತ್ತೀಚೆಗೆ ಸುಮಾರು 10 ಲಕ್ಷ ಮೌಲ್ಯದ ಗಾಂಜಾ ವಶಪಡಿಸಿ ಕೊಂಡಿರುವುದು ಸ್ವಾಗತಾರ್ಹ. ಆದರೆ, ತಾಲ್ಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳ ಸಂಪೂರ್ಣ ಜಾಲವನ್ನು ಪತ್ತೆ ಹಚ್ಚುವ ಅಗತ್ಯವಿದೆ. ಪ್ರಕರಣಗಳ ಪತ್ತೆ ಹಾಗೂ ತನಿಖೆಯಲ್ಲಿ ಯಾವುದೇ ರೀತಿಯ ಲೋಪ ಅಥವಾ ರಾಜಕೀಯ ಒತ್ತಡವಿದ್ದರೆ ಅದನ್ನು ತನಿಖೆಯ ಮೂಲಕ ಸ್ಪಷ್ಟಪಡಿಸಬೇಕೆಂದರು.

ತಾಲ್ಲೂಕಿನಲ್ಲಿ ಕಾನೂನುಬಾಹಿರ ಚಟುವಟಿಕೆಗಳ ಕುರಿತು ಪೊಲೀಸ್ ಇಲಾಖೆ ವಿಶೇಷ ಕಾರ್ಯಾಚರಣೆ ಕೈಗೊಳ್ಳಬೇಕು. ಈ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಾಗು ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರಿಗೆ ಲಿಖಿತ ದೂರು ಸಲ್ಲಿಸಿ, ಸಕಲೇಶಪುರ ತಾಲ್ಲೂಕಿನಲ್ಲಿ ನಡೆಯುತ್ತಿರುವ ಕಾನೂನುಬಾಹಿರ ಚಟುವಟಿಕೆಗಳ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಮನವಿ ಮಾಡಲಾಗುವುದೆಂದು ತಿಳಿಸಿದರು.

2028ರ ವೇಳೆಗೆ ಕರ್ನಾಟಕವನ್ನು ನಶೆಮುಕ್ತ ರಾಜ್ಯವನ್ನಾಗಿಸುವ ಗುರಿಯನ್ನು ರಾಜ್ಯ ಸರ್ಕಾರ ಹೊಂದಿದೆ. ಮಾದಕ ವಸ್ತುಗಳ ವಿರುದ್ಧ ಜಾಗೃತಿ ಮೂಡಿಸುವುದು, ವಿದ್ಯಾರ್ಥಿಗಳು ಹಾಗು ಯುವಜನರನ್ನು ಅಭಿಯಾನದಲ್ಲಿ ತೊಡಗಿಸಿಕೊಳ್ಳುವುದು ಮತ್ತು ಅಕ್ರಮ ಮಾರಾಟದ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರ ಒತ್ತು ನೀಡಿದೆ. ಆದರೆ, ಈ ಗುರಿ ಸಕಲೇಶಪುರದಲ್ಲೂ ಪರಿಣಾಮಕಾರಿಯಾಗಿ ಜಾರಿಯಾಗಬೇಕಾದರೆ ಶಾಲಾ-ಕಾಲೇಜುಗಳ ಸುತ್ತಮುತ್ತ, ಗ್ರಾಮೀಣ ಪ್ರದೇಶಗಳು ಹಾಗೂ ಪ್ರಮುಖ ಸ್ಥಳಗಳಲ್ಲಿ ಪೊಲೀಸ್ ನಿಗಾ ಹೆಚ್ಚಿಸಬೇಕೆಂದು ಒತ್ತಾಯಿಸಿದರು.

## ಇ-ಕೆವೈಸಿಗೆ ಸರ್ವರ್ ಸಮಸ್ಯೆ: ಗ್ರಾಹಕರ ಪರದಾಟ

» **ಮೊದಲನೇ ಪುಟದಿಂದ**

ಸೂಚಿಸಿರುವುದು ಗೊಂದಲಕ್ಕೆ ಕಾರಣವಾಗಿದೆ. ಪಡಿತರ ಚೀಟಿಗಳಲ್ಲಿರುವ ಕುಟುಂಬದ ಹಲವು ಸದಸ್ಯರು ಶಿಕ್ಷಣ, ಉದ್ಯೋಗ ಸೇರಿ ವಿವಿಧ ಕಾರಣಗಳಿಂದ ಹೊರಜಿಲ್ಲೆ ಹಾಗೂ ಹೊರರಾಜ್ಯಗಳಲ್ಲಿ ನೆಲೆಸಿದ್ದಾರೆ. ಇಂತಹವರು ವಾರದ ರಜೆ ಮಾಡಿಕೊಂಡು ಸ್ವಗ್ರಾಮಕ್ಕೆ ಬಂದು ಇ-ಕೆವೈಸಿ ಮಾಡಿಸಿಕೊಳ್ಳಲು ಮುಂದಾಗುತ್ತಿದ್ದಾರೆ. ಆದರೆ ನ್ಯಾಯಬೆಲೆ ಅಂಗಡಿಗೆ ಬಂದ ಬಳಿಕ ಸರ್ವರ್ ಕೈಕೊಟ್ಟರೆ ಇಡೀ ದಿನ ಕಾಯುವ ಪರಿಸ್ಥಿತಿ ಎದುರಾಗುತ್ತಿದೆ.

ಕೆಲವೊಮ್ಮೆ ಹಲವು ಬಾರಿ ಪ್ರಯತ್ನಿಸಿದರೂ ಇ-ಕೆವೈಸಿ ಪೂರ್ಣಗೊಳ್ಳದ ಹಿನ್ನಲೆ ಉದ್ಯೋಗಿಗಳು ಹಾಗು ವಿದ್ಯಾರ್ಥಿಗಳು ವಾಪಾಸ್ ತೆರಳಬೇಕಾಗಿದೆ. ಮತ್ತೆ ರಜೆ ಮಾಡಿಕೊಂಡು ಸ್ವಗ್ರಾಮಕ್ಕೆ ಬಂದು ಪ್ರಕ್ರಿಯೆ ಪೂರ್ಣಗೊಳಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ಇದರಿಂದ ದೂರದ ಊರುಗಳಿಂದ ಆಗಮಿಸುತ್ತಿರುವ ಫಲಾನುಭವಿಗಳಿಗೆ ಸಮಯ ಹಾಗೂ ಹಣ ಎರಡೂ ವ್ಯರ್ಥವಾಗುತ್ತಿದೆ ಎಂದು ಸಾರ್ವಜನಿಕರು ಅಳಲು ತೋಡಿಕೊಂಡಿದ್ದಾರೆ.

**ಹೆಚ್ಚುವರಿ ಕೌಂಟರ್ ತೆರೆಯಲು ಆಗ್ರಹ**

ಇ-ಕೆವೈಸಿ ಪ್ರಕ್ರಿಯೆಗೆ ನಿಗದಿಪಡಿಸಿರುವ ಸೆಪ್ಟೆಂಬರ್ ಅಂತ್ಯದ ಗಡುವನ್ನು ಆಹಾರ ಇಲಾಖೆ ವಿಸ್ತರಿಸಬೇಕು. ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಕೌಂಟರ್‌ಗಳನ್ನು ತೆರೆಯುವ ಮೂಲಕ ತ್ವರಿತವಾಗಿ ಸೇವೆ ಒದಗಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕೇವಲ ನ್ಯಾಯಬೆಲೆ ಅಂಗಡಿಗಳಿಗೆ ಸೀಮಿತಗೊಳಿಸದೆ ಗ್ರಾಮ ಒನ್ ಸೇರಿದಂತೆ ಇತರ ಸಾಮಾನ್ಯ ಸೇವಾ ಕೇಂದ್ರಗಳಲ್ಲಿಯೂ ಇ-ಕೆವೈಸಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಿದರೆ ಜನದಟ್ಟಣೆ ಕಡಿಮೆಯಾಗಲಿದೆ. ಇದರಿಂದ ದೂರದ ಊರುಗಳಿಂದ ಬರುವ ಫಲಾನುಭವಿಗಳಿಗೂ ಅನುಕೂಲವಾಗಲಿದೆ ಎಂದು ಸಾರ್ವಜನಿಕರು ಅಭಿಪ್ರಾಯಪಟ್ಟಿದ್ದಾರೆ.

**ಪರ್ಯಾಯ ವ್ಯವಸ್ಥೆ ರೂಪಿಸಬೇಕು**

ಸರ್ವರ್ ಸಮಸ್ಯೆ ಹಾಗು ಇತರೆ ತಾಂತ್ರಿಕ ದೋಷಗಳಿಗೆ ಶಾಶ್ವತ ಪರಿಹಾರ ಕಲ್ಪಿಸಿ, ಪರ್ಯಾಯ ವ್ಯವಸ್ಥೆ ರೂಪಿಸಬೇಕು. ಹೊರಜಿಲ್ಲೆ ಹಾಗೂ ಹೊರರಾಜ್ಯಗಳಲ್ಲಿ ನೆಲೆಸಿರುವ ಕುಟುಂಬ ಸದಸ್ಯರು ಸ್ವಗ್ರಾಮಕ್ಕೆ ಬಂದ ಸಂದರ್ಭದಲ್ಲಿ ಯಾವುದೇ ತೊಂದರೆಯಿಲ್ಲದೆ ತ್ವರಿತವಾಗಿ ಇ-ಕೆವೈಸಿ ಪೂರ್ಣಗೊಳಿಸಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಹಾರ ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK